


ಕಲ್ಯಾಣ ಕಿರಣ

ಡಿಸೆಂಬರ್ - 2012

ಬೆಲೆ-ರೂ.20





ದಿ.28-10-2012 ರಂದು ಬಸವ ಕಲ್ಯಾಣದ ಕಲ್ಯಾಣ ಪರ್ವದಲ್ಲಿ ಪ್ರದರ್ಶಿಸಲಾದ ವಿಶಿಷ್ಟ ಪ್ರಯೋಗ " ಬಸವ ಧರ್ಮದ ಉದಯ ಮತ್ತು ಪುನರುತ್ಥಾನ" ದ 'ಅನುಭವ ಮಂಟಪ'ದ ಸನ್ನಿವೇಶದಲ್ಲಿ ಬೆಳಗಾವಿ ರಾ.ಬ. ದಳದ ಶರಣ-ಶರಣೆಯರು



ದಿ.11-11-2012 ರಂದು ಬೆಳಗಾವಿಯಲ್ಲಿ "ವಚನ ಚಿಂತನಾ ವೇದಿಕೆ" ಉದ್ಘಾಟಣ ಸಮಾರಂಭದಲ್ಲಿ " ಅಕ್ಕನ ಸಮಗ್ರ ವಚನಗಳು ಮತ್ತು ಯೋಗಾಂಗ ತ್ರಿವಿಧಿ"ಯನ್ನು ಪೂಜ್ಯ ಶ್ರೀ ಮ.ನಿ.ಪ್ರ ಸಿದ್ಧರಾಮ ಸ್ವಾಮಿಗಳು, ಬಿಡುಗಡೆ ಮಾಡಿದರು. ಜಿಲ್ಲಾ ಕ.ಸಾ.ಪ ಅಧ್ಯಕ್ಷರಾದ ಯ.ರು. ಪಾಟೀಲ್, ವಿಮರ್ಶಕರಾದ ಪ್ರೊ|| ಕೆ.ಎಸ್.ಕೌಜಲಗಿ ಕೃತಿಯ ಸಂಪಾದಕರಾದ ಸಚ್ಚಿದಾನಂದ ಚಟ್ಟನಳ್ಳಿ ಉಪಸ್ಥಿತರಿದ್ದರು.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಇಪ್ಪತ್ತಾರನೆಯ ಶರಣ ಮೇಳ

2013ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತಾರನೆಯ ಶರಣ ಮೇಳವು 2013ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮ ಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ
ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105

Sharana Mela Utsava Samithi, (Canara Bank, Bangalore)
SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ-42 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-12 ಡಿಸೆಂಬರ್-2012 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಲೇಖನಗಳು		ಲೇಖಕರು	ಪುಟ
1.	ಶರಣ ಮೇಳ	–	1
2.	ಸಂಪಾದಕೀಯ	–	
	1. ಸಾಹಿತ್ಯಿಕ ದೌರ್ಜನ್ಯ ಖಂಡನೀಯ	ಮಾತಾಜಿ	4
	2. ಪಂಚ ಪೀಠಾಧಿಶರ ಕುಚೋದ್ಯತನ	–"–	7
3.	ಬಸವ ವಚನಾಮೃತ-47	–	8
4.	ಬಸವ ಧರ್ಮಪೀಠದ ವಿವಿಧ ಯೋಜನೆಗಾಗಿ ಧನ ಸಹಾಯಕ್ಕೆ ಮನವಿ	–	25
5.	ಲಿಂಗಾಯತವು ಸ್ವತಂತ್ರ ಧರ್ಮ	ಶಿ.ಬಾ.ಪಾಟೀಲ್	26
6.	ಧರ್ಮಪಿತರ ಕರೆಯೋಲೆ	ಮಾತಾಜಿ	28
7.	ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಶರಣ ಮೇಳ ಪ್ರಚಾರ	–	31

ಮುಖ ಪುಟ : ಚಿನ್ಮಯಜ್ಞಾನಿ ಚನ್ನಬಸವಣ್ಣನವರು.
ಹೊದ್ದಿಕೆಯ ನಾಲ್ಕನೆಯ ಪುಟ : ಬಸವ ಕಲ್ಯಾಣದ ಬಸವ ದರ್ಶನ ಮಂಟಪದಲ್ಲಿ ದಿ.28-10-2012ರಂದು ಪ್ರತಿಷ್ಠಾಪನೆಗೊಂಡ ಅಮೃತ ಶಿಲಾಮೂರ್ತಿ.

ಡಿಸೆಂಬರ್-ಜನವರಿ ತಿಂಗಳಿನಲ್ಲಿ ಬರುವ ಹಬ್ಬ ಹುಣ್ಣಿಮೆ ಉತ್ಸವಗಳು

ಶರಣ ವ್ರತ ಸ್ವೀಕಾರದ ದಿನಗಳು

ಡಿಸೆಂಬರ್ 02	–	ಗುರು ಸಾರಾಯ ಸಂಪದ್ ವ್ರತ 40 ದಿವಸ
ಡಿಸೆಂಬರ್ 12	–	ಲಿಂಗ ಸಾರಾಯ ಸಂಪದ್ ವ್ರತ 30 ದಿವಸ
ಡಿಸೆಂಬರ್ 22	–	ಜಂಗಮ ಸಾರಾಯ ಸಂಪದ್ ವ್ರತ 20 ದಿವಸ
ಜನವರಿ 01	–	ಪ್ರಸಾದ ಸಾರಾಯ ಸಂಪದ್ ವ್ರತ 10 ದಿವಸ
ಜನವರಿ 14	–	ಕೂಡಲಸಂಗಮದಲ್ಲಿ ಶರಣ ಮೇಳ (ಬಸವ ಧರ್ಮ ಸಂಸ್ಥಾಪನಾ ದಿನ)

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

ಸಂಪಾದಕೀಯ :

ಸಾಹಿತ್ಯಿಕ ದೌರ್ಜನ್ಯ ಖಂಡನೀಯ

ಅಕ್ಕಮಹಾದೇವಿಯ ಸಮಗ್ರ ವಚನಗಳು, ಸ್ವರ ವಚನಗಳು, ಮತ್ತು ಯೋಗಾಂಗ ತ್ರಿವಿಧಿ ಇವುಗಳಿಂದ ಕೂಡಿದ ಒಂದು ಮಹತ್ವಪೂರ್ಣ ಗ್ರಂಥ "ಅಕ್ಕನ ಸಮಗ್ರ ವಚನಗಳು ಮತ್ತು ಯೋಗಾಂಗ ತ್ರಿವಿಧಿ" ಎಂಬ ಶೀರ್ಷಿಕೆಯ ಕೆಳಗೆ ಮುದ್ರಣಗೊಂಡು ದಿ 28-10-12ರಂದು ಬಸವ ಕಲ್ಯಾಣದ 11ನೇ ಕಲ್ಯಾಣಪರ್ವದ ಮಹಿಳಾಗೋಷ್ಠಿಯಲ್ಲಿ ಬಿಡುಗಡೆಯಾಯಿತು. ಶರಣ ಸಚ್ಚಿದಾನಂದ ಚಟನಳ್ಳಿ ಇವರು ಸಂಪಾದಿಸಿರುವ ಬಹಳ ಮಹತ್ವಪೂರ್ಣವಾದ ಸಂಶೋಧನಾತ್ಮಕವಾದ ಗ್ರಂಥವಿದು. ಅಕ್ಕನ ವಚನಗಳು ಅಲ್ಲಲ್ಲೇ ಬಿಡಿಬಿಡಿಯಾಗಿ ಪ್ರಕಟಗೊಂಡಿವೆ. ನಾವೂ ಅಕ್ಕನ ಅಮರವಾಣಿ ಎಂಬ ಪುಸ್ತಕವನ್ನು ಪ್ರಕಟಿಸಿದ್ದೇವೆ. ಕರ್ನಾಟಕ ವಿಶ್ವವಿದ್ಯಾಲಯದವರು ಪ್ರಕಟಿಸಿದ(1968) ನಂತರ ಸಮಗ್ರವಾಗಿ ಅಕ್ಕನ ಸಾಹಿತ್ಯ ಹೊರಬರುತ್ತಿರುವುದು ಈಗಲೆ.

ಈ ಪುಸ್ತಕದ ವೈಶಿಷ್ಟ್ಯವೇನೆಂದರೆ ಅಕ್ಕನ ವಚನಗಳನ್ನು ಅವರ ಜೀವನ ಕ್ರಮಕ್ಕೆ ಅನುಸಾರವಾಗಿ ಹೊಂದಿಸಿರುವುದು. ನಾನು ಬರೆದ ತರಂಗಿಣಿಯನ್ನು ಆಧಾರವಾಗಿ ಇಟ್ಟುಕೊಂಡು ಶರಣ. ಸಚ್ಚಿದಾನಂದ ಅವರು ವಚನಗಳನ್ನು ವರ್ಗೀಕರಿಸಿದ್ದಾರೆ. ತರಂಗಿಣಿಯಲ್ಲಿ ನಾನು ಅಕ್ಕನ ವಚನಗಳನ್ನು ನೇರವಾಗಿ ಇಲ್ಲವೆ ಪರೋಕ್ಷವಾಗಿ ಗದ್ಯರೂಪದಲ್ಲಿ ಸಂಭಾಷಣೆಯಲ್ಲಿ ಬಳಸಿಕೊಂಡಿದ್ದೇನೆ. ಆ ಕ್ರಮದ ಮೇಲೆ ವಚನಗಳನ್ನು ವರ್ಗೀಕರಿಸಿದ್ದಾರೆ.

ಈ ಕ್ರಮದಲ್ಲಿ ವರ್ಗೀಕರಿಸಬೇಕೆಂದು ಅಧ್ಯಯನ ಮಾಡುತ್ತ ಇರುವಾಗ ಸಚ್ಚಿದಾನಂದ ಅವರಿಗೆ ಒಂದು ವಿಷಯ ಗಮನಕ್ಕೆ ಬಂದಿತು. ಅದೆಂದರೆ ಅಕ್ಕನವರು "ಚನ್ನಮಲ್ಲಿಕಾರ್ಜುನದೇವರ ದೇವಾ" ಎಂಬ ಎರಡನೆಯ ಮುದ್ರಿಕೆಯೊಂದನ್ನು ಬಳಸಿರುವುದು. ಅದನ್ನು ಪ್ರಸ್ತಾಪಿಸಿದಾಗ ನನಗೆ ಅತೀವ ಸಂತೋಷವಾಯಿತು. ನಾವು ಹುಡುಕುತ್ತಿದ್ದ ಒಂದು ಪ್ರಶ್ನೆಗೆ ನನಗೆ ಉತ್ತರ ಸಿಕ್ಕಿತ್ತು.

ಧರ್ಮಪಿತ ಬಸವಣ್ಣನವರು, ವೀರ ವಿರಾಗಿಣಿ ಅಕ್ಕಮಹಾದೇವಿ, ಲಿಂಗಾಂಗ ಯೋಗಿ ಸಿದ್ಧರಾಮೇಶ್ವರ – ಇವರು ಶೈವ ಮೂಲದಿಂದ ಏಕದೇವೋಪಾಸನೆಗೆ ಬಂದವರು. ಜೀವನದ ಪೂರ್ವಾರ್ಧದಲ್ಲಿ ಏಕದೇವತಾ (ಶಿವೋ) ಉಪಾಸಕರಾಗಿದ್ದು ನಂತರ ನಿರಾಕಾರ ದೇವರ ಪೂಜೆಗೆ ನಿಂತವರು, ಏಕದೇವ ಉಪಾಸನೆಗೆ ಒತ್ತುಕೊಟ್ಟವರು. ಈ ಹಿನ್ನೆಲೆಯಲ್ಲಿ "ಲಿಂಗದೇವ" ಎಂಬ ವಚನಾಂಕಿತವನ್ನು ಹಲವು ವಚನಗಳಲ್ಲಿ ಕೂಡಲ ಸಂಗಮದೇವರ ಬದಲಿಗೆ ನಾನು ಇಟ್ಟು "ಬಸವ ವಚನ ದೀಪ್ತಿ" – ಪುಸ್ತಕ ಪ್ರಕಟಿಸಿದೆ. ಆಗ ಆಕಾಶ ಭೂಮಿ ಅದುರುವಂತೆ ಕೆಲವರು ಬೊಬ್ಬೆ ಇಟ್ಟರು. ಆ ಗದ್ದಲ ಈಗ ಕಡಿಮೆಯಾಗಿದೆ. ಏನು ಹೆಚ್ಚಿನ ಜನ ಅರ್ಥಮಾಡಿಕೊಂಡರೆಂದೋ ಅಥವಾ ಇನ್ನೇನೂ ಮಾಡಲಾರದ ನಿಸ್ಸಹಾಯಕತೆಯಿಂದಲೋ ಸುಮ್ಮನಾಗಿದ್ದಾರೆ. ಅಕ್ಕನ ಈ ಬದಲಾವಣೆಗೆ ಪರಿಹಾರ ಹುಡುಕಬೇಕೆಂದು ನಾನು ಒಂದು ಪ್ರಯೋಗ ಮಾಡಿದೆ. ಚನ್ನಮಲ್ಲಿಕಾರ್ಜುನ ವಚನಾಂಕಿತವನ್ನು –ಶಿವ ಸಂಬಂಧಿ ವಚನಗಳಲ್ಲಿ ಹಾಗೆಯೇ ಇಟ್ಟು ನಿರಾಕಾರ ದೇವರನ್ನು ಸಂಬಂಧಿಸುವ ವಚನಗಳಲ್ಲಿ ಚನ್ನಮಲ್ಲಿಕಾರ್ಜುನನೊಡನೆ ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂದು ವಿವರಣೆ ಕೊಟ್ಟೆ. ಈ ವಚನಗಳಲ್ಲಿ ಬರುವ ಚನ್ನಮಲ್ಲಿಕಾರ್ಜುನ –ಕೈಲಾಸಪತಿ ಶಿವನಾಗಿರದೆ ನಿರಾಕಾರ ಲಿಂಗದೇವ ಎಂದು ಹೇಳುವುದು ಈ ಬದಲಾವಣೆಯ ಉದ್ದೇಶವಾಗಿತ್ತು.

ಚನ್ನಮಲ್ಲಿಕಾರ್ಜುನ ದೇವರು ಎಂದರೆ ಹೊಳೆವ ಕೆಂಜೆಡೆಗಳ, ಮಣಿ ಮುಕುಟದ ಹುಲಿಪಲ್ಲ ಗೊರವನು. ಇಂಥ ಶಿವ ಯಾರನ್ನು ಧ್ಯಾನ ಮಾಡುತ್ತಾನೋ ಅವನೇ ದೇವರು(God). ಇದನ್ನು ದೃಢಪಡಿಸುವಂತೆ ಅಕ್ಕನ ವಚನಗಳಲ್ಲಿ "ಚನ್ನಮಲ್ಲಿಕಾರ್ಜುನದೇವರ ದೇವ" ಎಂಬ ವಚನಾಂಕಿತ ಸಿಕ್ಕಾಗ ನಮ್ಮ ಸಂತೋಷ ಹೇಳತೀರದಷ್ಟು. ನಮ್ಮ ಸಮಸ್ಯೆಗೆ ಪರಿಹಾರ ಸಿಕ್ಕಿತ್ತು. ಇದನ್ನು ಸಂಶೋಧಿಸಿದವರು ಶರಣ. ಸಚ್ಚಿದಾನಂದ. ಕೆಲವರು ಟೀಕಾಕಾರರು ನಾನು ಟೀಕೆಗೆ ಹೆದರಿ,

ನೇರವಾಗಿ ನನ್ನ ಹೆಸರು ಹಾಕಿಕೊಳ್ಳದೆ ಶಿಷ್ಯ ಸಚ್ಚಿದಾನಂದನ ಮೂಲಕ ವಚನಾಂಕಿತ ಬದಲಾವಣೆ ಮಾಡಿದ್ದೇನೆ ಎಂದಿದ್ದಾರೆ. ನಾನು ಅವೈಜ್ಞಾನಿಕ ಟೀಕೆಗೆ ಹೆದರುವವಳೂ ಅಲ್ಲ ; ಮೇಲಾಗಿ ಒಂದು ಸತ್ಯವನ್ನು ಸಂಶೋಧಿಸಿದ ಹಿರಿಮೆಯನ್ನು ನಾನೇಕೆ ಬಿಟ್ಟುಕೊಟ್ಟೇನು ?! ಹಾಗೆಂದು ಸಚ್ಚಿದಾನಂದ ಸಂಶೋಧಿಸಿದ ನೂತನ ಸತ್ಯವನ್ನು ನನ್ನ ಸಂಶೋಧನೆ ಎಂದು ಹೇಳಿಕೊಳ್ಳುವ ಅಪ್ರಾಮಾಣಿಕಳೂ ಅಲ್ಲ.

ಸಾಹಿತ್ಯಿಕ ದೌರ್ಜನ್ಯ

ಸಾಹಿತ್ಯ ಕ್ಷೇತ್ರ ಮಡುಗಟ್ಟಿ, ಮಲೆತ ನೀರಿನಂತಾಗಿದ್ದು ಬದಲಾವಣೆಯನ್ನು ವಿರೋಧಿಸುವ ಮನೋಭಾವ ಬೆಳೆಸಿಕೊಂಡಿದೆ. ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಗೊ.ರು.ಚನ್ನಬಸಪ್ಪ, ಹಿರಿಯ ಸಂಶೋಷಕ sorry ಸಂಶೋಧಕ ಡಾ॥ ಎಂ. ಚಿದಾನಂದಮೂರ್ತಿ ಅಭಿಪ್ರಾಯ ಕೊಡುವಲ್ಲಿ ಮೊದಲಿಗರು. ಇವರುಗಳು ಲಿಂಗಾಯತ ಧರ್ಮವನ್ನು, ವಚನ ವಾಙ್ಮಯವನ್ನು, ಏಕದೇವೋಪಾಸನೆಯನ್ನು ಎಷ್ಟರ ಮಟ್ಟಿಗೆ ಆಚರಿಸುತ್ತಾರೆ ಎಂದು ಅವಲೋಕನ ಮಾಡಿಕೊಳ್ಳುವುದು ಅಗತ್ಯವಿದೆ. ಡಾ॥ ಚಿ.ಮೂ ಇಷ್ಟಲಿಂಗಧಾರಣೆಯನ್ನೇ ಮಾಡಿಕೊಂಡಿಲ್ಲ. ಗುರು ಬಸವಣ್ಣನವರ ಬಗ್ಗೆ ಒಂದು ಪುಸ್ತಕ ಬರೆದು ಗುರು ಬಸವಣ್ಣನವರಿಗೆ ಪುಸ್ತಕದುದ್ದಕ್ಕೂ ಅಪಚಾರ ಮಾಡಿದ್ದಾರೆ. ಅವರ ಅಂತರಂಗದಲ್ಲಿ ಶರಣರ ಬಗ್ಗೆ ಅಸಹನೆ ದ್ವೇಷ ಕುದಿಯುತ್ತಿದೆ. ಶರಣರ ಚರಿತ್ರೆಗೆ ಮಸಿ ಬಳಿಯಲು ಎಲ್ಲಾ ಸಂದರ್ಭಗಳನ್ನೂ ಉಪಯೋಗಿಸಿಕೊಳ್ಳುತ್ತಾರೆ. ಇತ್ತೀಚೆಗೆ ಅಂಥ ಲೇಖನವೊಂದನ್ನು ಅಣ್ಣ–ಅಕ್ಕ–ಅಲ್ಲಮ ಎಂಬ ಶೀರ್ಷಿಕೆಯಡಿಯಲ್ಲಿ ಬರೆದು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸಿದರು. ವೀರಶೈವ–ಲಿಂಗಾಯತ ಎರಡೂ ಒಂದೇ ಎಂದು ಗೊಂದಲ ಹುಟ್ಟಿಸುವ ಹೇಳಿಕೆ ಕೊಡುತ್ತಲೇ ಇರುತ್ತಾರೆ.

ಇವರಿಗೆಲ್ಲ ಹೊಸ ವಿಚಾರ ಹೊರಬರುವ ಇಷ್ಟವಿಲ್ಲ. ಒಂದು ಪುಸ್ತಕ ಹೊರಬಂದರೆ ಅದರ ಬಗ್ಗೆ ಅಧ್ಯಯನ ಮಾಡಿ ಅಭಿಪ್ರಾಯ ಕೊಡಬೇಕಲ್ಲ. ಹಾಗಿಲ್ಲ 'ಮಾತಾಜಿ' ಬರೆದಿದ್ದಾರೆ ಅಂದ ತಕ್ಷಣ ಕಣ್ಣು ಕಿವಿ ಮುಚ್ಚಿಕೊಂಡು ಟೀಕೆ ಮಾಡಲು ಶುರು ಮಾಡುತ್ತಾರೆ. ಪುಸ್ತಕ ಓದಲು ಸಿಗದಂತೆ ಮುಟ್ಟುಗೋಲು ಹಾಕಿರಿ ಎಂದು ಬೊಬ್ಬೆ ಇಡುತ್ತಾರೆ. ಅಲ್ಲಮಪ್ರಭುದೇವರ ವಚನಾಂಕಿತ ಗುಹೇಶ್ವರ. ಪ್ರಭುದೇವರೇ ಹೇಳುವಂತೆ ಇದು ನಿರಾಕಾರ ದೇವನಿಗೆ ಸಂಬಂಧಪಟ್ಟುದು. ತಮ್ಮ ಸಂಶೋಧನೆ ಎಂದು ಡಾ॥ ಚಿ.ಮೂ. ಗ್ರಾಮದೇವತೆ ಗೊಗ್ಗೇಶ್ವರ ಎಂದು ವಚನಾಂಕಿತವನ್ನು ಬಹು ಹಿಂದೆ ಪ್ರಕಟಿಸಿದ್ದರು. ತಾವು ಕೆಳಮಟ್ಟಕ್ಕಿಳಿಸಿ ಮಾಡಿದ್ದು ಸಂಶೋಧನೆ, ಇತರರು ಮೇಲ್ಮಟ್ಟಕ್ಕೇರಿಸುವಂತೆ ಉತ್ತಮ ವಿಚಾರಕೊಟ್ಟರೆ ಅದು ಅಪಚಾರವೆ ? ಬಸವಾದಿ ಪ್ರಮಥರು ಕೊಟ್ಟ ತತ್ತ್ವಗಳು, ಮುಖ್ಯವಾಗಿ ಏಕದೇವೋಪಾಸನೆಯನ್ನು ಪ್ರಕಾಶಿಸುವ ಪ್ರಯತ್ನ ನಮ್ಮದಾದರೆ ಈ ತತ್ತ್ವವನ್ನು ಮರೆಮಾಚುವ ಪ್ರಯತ್ನ ಕೆಲವರದು.

ವೀರಶೈವ ಮಹಾಸಭಾದ ಮಾಜಿ ಅಧ್ಯಕ್ಷರಾದ ಶ್ರೀ ಭೀಮಣ್ಣ ಖಂಡ್ರೆ ಅವರು ವಚನಾಂಕಿತ ಬದಲಾವಣೆ ಅಕ್ಷಮ್ಯ ಅಪರಾಧ ಎಂದಿದ್ದಾರೆ. ಅವರಿಗೆ ಕನ್ನಡವೇ ಓದಲು ಬರುವುದಿಲ್ಲ. ವಚನ ಸಾಹಿತ್ಯ ಓದುವುದಂತೂ ದೂರವೇ ಉಳಿಯಿತು. ಗದುಗಿನ ಜಗದ್ಗುರುಗಳು ಸಹ ವಿರೋಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರು ಪುಸ್ತಕ ಓದುವುದಿರಲಿ ನೋಡಿಯೂ ಇರಲಿಕ್ಕಿಲ್ಲ. ಆದರೆ ಅಭಿಪ್ರಾಯ ಕೊಡುವುದರಲ್ಲಿ ಮುಂದು. ಇದೊಂದು ಸರಪಳಿ ಪ್ರತಿಕ್ರಿಯೆ (chain reaction)ಯಂತೆ. ಅವರು ಹೇಳಿದರು ಅಂತ ಇವರು. ಇವರು ಹೇಳಿದರು ಅಂತ ಮತ್ತೊಬ್ಬರು! ಒಬ್ಬ ಕಲಾವಿದ ಬಹಳ ಕಷ್ಟಪಟ್ಟು ಒಂದು ಸುಂದರ ಚಿತ್ರ ಬಿಡಿಸುತ್ತಾನೆ ಎಂದಿಟ್ಟುಕೊಳ್ಳುವಾ. ಅದರ ಮೇಲೆ ಮಸಿ ಉಗ್ಗಿದಂತೆ ಈ ಟೀಕಾಕಾರರ ಪ್ರಯತ್ನ. ಒಂದು ಸತ್ಯವನ್ನು ಇತರರು ಅರಿಯದಂತೆ ಮಾಡುತ್ತಾರೆ.

ಇನ್ನು ಕೆಲವರದು ವೈಯಕ್ತಿಕ ಮತ್ಸರ. ಮಾತಾಜಿ ಏನು ಮಾಡಿದರೂ ಅದನ್ನು ಟೀಕೆ ಮಾಡಬೇಕು ಎಂಬುದು ಅವರ ism ತತ್ತ್ವಜ್ಞಾನ ಈಗಲಾದರೂ ಅಷ್ಟೆ. ಸಚ್ಚಿದಾನಂದ ಅವರ ಮೇಲಿನ ಆಕ್ರೋಶಕ್ಕಿಂತಲೂ ಪುಸ್ತಕದ ಪ್ರಕಾಶಕರಾಗಿರುವ ನಮ್ಮ ಮೇಲಿನ ಆಕ್ರೋಶವೇ ಈ ವಿರೋಧದ ಹಿಂದೆ ಹೆಚ್ಚಾಗಿ ಇದೆ.

ಅಭಿನಂದನಾರ್ಹ ಸಂಶೋಧನೆ : ವಚನಗಳನ್ನು ಎಲ್ಲರೂ ಓದುವರು. ಆದರೆ ಅದರಲ್ಲಿ ಹುದುಗಿದ ಅಮೂಲ್ಯ ತತ್ತ್ವಗಳನ್ನು ಗುರುತಿಸುವವರು ಅಪರೂಪ. ಉದಾ : ಲಿಂಗದೇವ–ಒಂದು ಅನರ್ಘ್ಯ ರತ್ನ. ಗುರು ಬಸವಣ್ಣನವರ ವಚನಗಳ ಗಣಿಯಲ್ಲೇ ಸಿಕ್ಕ ದೇವರ ಹೆಸರಿನ ವಜ್ರ ಎಷ್ಟೋ ಲಕ್ಷಾಂತರ ಜನ ವಚನ ಓದಿದ್ದಾರೆ. ಅದು ನನ್ನ ಕಣ್ಣಿಗೇ ಬೀಳಬೇಕೆ ? ಹಾಗೆಯೇ ಅಕ್ಕನ ವಚನಗಳನ್ನು ನಾನೂ ಓದಿದ್ದೇನೆ. ಚನ್ನಮಲ್ಲಿಕಾರ್ಜುನ ದೇವರ ದೇವ ಓದಿದ್ದರೂ ಅದರ ಆಳಕ್ಕೆ ಇಳಿದಿರಲಿಲ್ಲ.

ಕರ್ನಾಟಕ ಸರಕಾರ ಪ್ರಕಟಿಸಿರುವ :

2001ರ ದ್ವಿತೀಯ ಮುದ್ರಣ : ವಚನ ಸಂಪುಟ 5. ಶಿವಶರಣೆಯರ ವಚನಗಳು

1. ವಚನ ಸಂಖ್ಯೆ–82 : "ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ"
2. ವಚನ ಸಂಖ್ಯೆ–94 : "ಎನಗೇಕಯ್ಯಾ ? ನಾ ಪ್ರಪಂಚಿನ ಪುತ್ಥಳಿ
3. ವಚನ ಸಂಖ್ಯೆ–156: "ಕಾಣುತ್ತ ಕಾಣುತ್ತ ಕಂಗಳು ಮುಚ್ಚಿದೆ"
4. ವಚನ ಸಂಖ್ಯೆ–170: "ಕಾಯವಿಕಾರಿಗೆ ಕಾಯಕ್ಕೆ ಮೆಚ್ಚಿದೆ"
5. ವಚನ ಸಂಖ್ಯೆ–252: "ಪ್ರಥಮದಲಾದ ಮೋಹ ಸಾತ್ವಿಕವಾದಡೆ ಕಿತವೇಕಯ್ಯಾ"
6. ವಚನ ಸಂಖ್ಯೆ–289: "ಫಲ ಒಳಗೆ ಪಕ್ವವಾಗಿಯಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು."
7. ವಚನ ಸಂಖ್ಯೆ–332: "ಮರೆದೊರಗಿ, ಕನಸ ಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು."
8. ವಚನ ಸಂಖ್ಯೆ–371: "ವೃಷಭನ ಹಿಂದೆ ಪಶುವಾನು ಬಂದೆನು"
9. ಶಿವದಾಸ ಗೀತಾಂಜಲಿ–ಸಂ. ಡಾ.ಎಲ್. ಬಸವರಾಜು : ಪಲ್ಲವಿ ಸಂಖ್ಯೆ 681
10. "ಆಪತ್ತಿಗೊಳಗಾದೆನಮ್ಮಯ್ಯ, ನಾನಾಪತ್ತಿಗೊಳಗಾದೆ !" (ಸ್ವರ ವಚನ)

ಈ ಮೇಲಿನ ಎಲ್ಲಾ ವಚನಗಳಲ್ಲೂ ವಚನಾಂಕಿತ "ಚೆನ್ನಮಲ್ಲಿಕಾರ್ಜುನ ದೇವರ ದೇವಾ" ಎಂದಿದೆ. ಆದ್ದರಿಂದ ಇಂತಹ ಒಂದು ಮಹತ್ವಪೂರ್ಣ ಸಂಶೋಧನಾತ್ಮಕ ಪುಸ್ತಕವು ಓದುಗರ ಕೈಗೆ ಸಿಗಬೇಕು. ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವಂತಹ ದುಡುಕಿನ ಕ್ರಮವನ್ನು ಕೈಗೊಳ್ಳಬಾರದು.

ಈಗ ಸಚ್ಚಿದಾನಂದರು ಸಂಶೋಧಿಸಿರುವ ಅಕ್ಕನ ಎರಡನೆ ವಚನಾಂಕಿತ ಬಹಳ ಸಮಂಜಸವಾಗಿರುವ ಕಾರಣ ನಿರಾಕಾರ ದೇವನಿಗೆ ಸಂಬಂಧಿಸಿ 'ಚನ್ನಮಲ್ಲಿಕಾರ್ಜುನ ದೇವರ ದೇವ' ವಚನಾಂಕಿತ, ಶ್ರೀಶೈಲ ಮಲ್ಲಿಕಾರ್ಜುನನಿಗೆ ಸಂಬಂಧಿಸಿ "ಚನ್ನಮಲ್ಲಿಕಾರ್ಜುನ, ಚನ್ನಮಲ್ಲಿಕಾರ್ಜುನ ದೇವ" ಅತ್ಯಂತ ಸೂಕ್ತವಾಗುವುವು.

ಇಂಥ ಮಹತ್ವಪೂರ್ಣ ಸಂಶೋಧನೆ ಮತ್ತು ಅಕ್ಕಮಹಾದೇವಿಯವರ ಜೀವನ ಕ್ರಮಕ್ಕನುಸಾರವಾಗಿ ವಚನಗಳ ವಿಂಗಡಣೆ ಮಾಡಿದ್ದಕ್ಕಾಗಿ ಶರಣ ಸಚ್ಚಿದಾನಂದ ಚಟನಳ್ಳಿ ಅವರನ್ನು ಅಭಿನಂದಿಸೋಣ. ಅವರಿಂದ ಇನ್ನೂ ಹೆಚ್ಚಿನ ಸಾಹಿತ್ಯಕೃತಿಗಳು ಹೊರಬರಲೆಂದು ಆಶಿಸೋಣ.

–ಮಾತಾಜಿ

ಅಕ್ಕನ ಅಮರವಾಣಿ

ವೇದಶಾಸ್ತ್ರ ಆಗಮ ಪುರಾಣಂಗಳೆಲ್ಲವೂ
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ
ಇವ ಕುಟ್ಟಲೇಕೆ ಕುಸುಕಲೇಕೆ ?
ಅತ್ತಲಿತ್ತ ಹರಿವ ಮನದ ಶಿರವ ಹರಿದಡೆ
ಬಟ್ಟಬರಿಯ ಬಯಲು ಚನ್ನಮಲ್ಲಿಕಾರ್ಜುನದೇವರ ದೇವಾ

ಪಂಚ ಪೀಠಾಧೀಶರ ಕುಚೋದ್ಯತನ
ಗಂಗಾವತಿ ರಾಷ್ಟ್ರೀಯ ಬಸವ ದಳದವರ ಅಭಿನಂದನಾರ್ಹ ಪ್ರತಿಭಟನೆ.

ಗಂಗಾವತಿಯಲ್ಲಿ ಪಂಚಾಚಾರ್ಯ ಸ್ವಾಮಿಗಳ ದಸರಾ ದರ್ಬಾರ್ ನವರಾತ್ರಿಯಲ್ಲಿ ನಡೆಯಿತು. ಅವರಲ್ಲಂತೂ ಶರಣ ಸಂಸ್ಕೃತಿ, ಲಿಂಗಾಯತ ಸಂಸ್ಕೃತಿ ಎಳ್ಳಷ್ಟೂ ಇಲ್ಲ. ಅವರು ಏರುವುದು ಸಿಂಹಾಸನವನ್ನು, ನಡೆಸುವುದು ದರ್ಬಾರನ್ನು ! ದಿ.17–10–2012ರಂದು ರಾತ್ರಿ 10–15ಕ್ಕೆ 'ನಜ಼ರ್' (ಕಾಣಿಕೆ ಸಲ್ಲಿಸಿ ನಮಸ್ಕರಿಸುವ) ಸಲ್ಲಿಸುವ ಕಾರ್ಯಕ್ರಮ ನಡೆಸಿದರಂತೆ. ಅದರಲ್ಲಿ ಗುರು ಬಸವಣ್ಣನವರ ವೇಷಧಾರಿಯೊಬ್ಬರು ವೀರ ಸೋಮೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ 'ನಜ಼ರ್' ಸಮರ್ಪಣೆ ಮಾಡಿ, ನಮಸ್ಕರಿಸಿ ಬೆನ್ನು ತಿರುಗಿಸದೆ ಹಿಂದಕ್ಕೆ ಹೋಗುವ ಕಾರ್ಯಕ್ರಮ ಇದ್ದಿತಂತೆ. ಪಂಚಾಚಾರ್ಯರ ಮತ್ತು ಇವರ ಕಾರ್ಯಕ್ರಮ ಏರ್ಪಡಿಸಿದವರ ಉದ್ದೇಶ ಗುರು ಬಸವಣ್ಣನವರಿಗೆ ಅವಮಾನ ಮಾಡುವುದಾಗಿರುತ್ತದೆ. ಇದನ್ನು ಪ್ರತಿಭಟಿಸಿ ಗಂಗಾವತಿ ರಾಷ್ಟ್ರೀಯ ಬಸವ ದಳದ ಶರಣರು, ಅಧ್ಯಕ್ಷರಾದ ಶರಣ. ಕೆ. ಪಂಪಣ್ಣ ಅವರ ನೇತೃತ್ವದಲ್ಲಿ ಗಂಗಾವತಿ ಉಪ ವಿಭಾಗದ ಡಿವೈ.ಎಸ್.ಪಿ ಮೂಲಕ ಕೊಪ್ಪಳದ ಎಸ್.ಪಿ. ಅವರಿಗೆ ಪ್ರತಿಭಟನೆಯ ಪತ್ರ ನೀಡಿದ್ದಾರೆ. ಗಂಗಾವತಿ ರಾಷ್ಟ್ರೀಯ ಬಸವ ದಳದವರ ಈ ಸಾಮಯಿಕ ಪ್ರತಿಭಟನೆ ಅಭಿನಂದನಾರ್ಹ.

ಪಂಚ ಪೀಠಾಧೀಶರದು ಕುಚೋದ್ಯದ ನಡಾವಳಿಕೆ. ಇದರಿಂದ ಗುರು ಬಸವಣ್ಣನವರಿಗೆ ಅಪಮಾನ ಮಾಡುತ್ತೇವೆಂದು ಅವರು ಭಾವಿಸಿದ್ದರೆ ಅದು ಮೂರ್ಖತನ. ಹಿಂದೆ ಜಯಚಂದ್ರ ಎಂಬ ರಾಜನ ಮಗಳು ಸಂಯುಕ್ತೆಯ ಸ್ವಯಂವರ ಏರ್ಪಡಿಸಿ ಬಾಗಿಲು ಕಾಯುವ ದ್ವಾರಪಾಲಕನ ಜಾಗದಲ್ಲಿ ಪೃಥ್ವಿರಾಜನ ಮೂರ್ತಿಯನ್ನು ಇಡಿಸಿದ್ದನಂತೆ. ಅವನ ಉದ್ದೇಶ ಪೃಥ್ವಿರಾಜನಿಗೆ ಅವಮಾನ ಮಾಡುವುದು. ಇತಿಹಾಸದಲ್ಲಿ ಇದು ದಾಖಲಾಗಿದೆ. ಶೂರನಾದ ಪೃಥ್ವಿರಾಜನನ್ನು ಪ್ರೀತಿಸುತ್ತಿದ್ದ ಸಂಯುಕ್ತೆ ಆಸ್ಥಾನದಲ್ಲಿದ್ದ ಯಾವ ರಾಜ, ಯುವರಾಜನಿಗೂ ಮಾಲೆ ಹಾಕದೆ ಬಾಗಿಲಬಳಿ ಇದ್ದ ಪೃಥ್ವಿರಾಜನ ಮೂರ್ತಿಗೆ ಮಾಲೆ ಹಾಕಿದಳು. ಹೊಂಚು ಹಾಕುತ್ತಿದ್ದ ಈ ಶೂರ ಸಂಯುಕ್ತೆಯನ್ನು ಕುದುರೆ ಮೇಲೆ ಹತ್ತಿಸಿಕೊಂಡು ಹೋದ. ಇತಿಹಾಸದಲ್ಲಿ ಪೃಥ್ವಿರಾಜನ ಹೆಸರು ಧೀರ ಶೂರನೆಂದು, ಜಯಚಂದ್ರನ ಹೆಸರು ವಿದೇಶೀಯರನ್ನು ಒಳಗೆ ಬಿಟ್ಟುಕೊಂಡ ದೇಶದ್ರೋಹಿ ಎಂದು ದಾಖಲಾಗಿದೆ.

ಯಾರೋ ಒಬ್ಬರಿಗೆ ಗುರು ಬಸವಣ್ಣನವರ ವೇಷ ಹಾಕಿಸಿ 'ನಜ಼ರ್' ಸಮರ್ಪಣೆ ಮಾಡಿಸಿಕೊಂಡರೆ ಪಂಚಾಚಾರ್ಯರೇನೂ ದೊಡ್ಡವರಾಗಲಿಲ್ಲ, ಧರ್ಮಪಿತ ಬಸವಣ್ಣನವರೇನೂ ಸಣ್ಣವರಾಗಲಿಲ್ಲ. ಇಂಥ ಕಾರ್ಯಕ್ರಮದಿಂದ ಪಂಚ ಪೀಠಾಧೀಶರ ಕುತಂತ್ರ, ಸಣ್ಣತನ ಬಯಲಿಗೆ ಬರುತ್ತದೆ ಅಷ್ಟೆ !

ನಡುನೆತ್ತಿಯ ಮೇಲಿರುವ ಸೂರ್ಯನ ಮುಖಕ್ಕೆ ಉಗುಳಿದರೆ ಉಗುಳಿದವನ ಮುಖದ ಮೇಲೆಯೇ ಬೀಳುವಂತೆ ಗುರು ಬಸವಣ್ಣನವರನ್ನು ನಿಂದಿಸಿದರೆ ನಿಂದಿಸಿದವರು ತಮ್ಮ ಗೌರವವನ್ನು ತಾವೇ ಕಳೆದುಕೊಳ್ಳುತ್ತಾರೆ. ಅದರಿಂದ ಯಾರೋ ಕೆಲವರು ಮೂರ್ಖರು, ಜಾತಿವಾದಿಗಳು ಸಂತೋಷಪಡಬಹುದೇ ವಿನಾ ವಿವೇಕಿಗಳಲ್ಲ. ಏಕೆಂದರೆ ಗುರು ಬಸವಣ್ಣನವರು ತಮ್ಮ ತತ್ತ್ವ–ಸಿದ್ಧಾಂತಗಳಿಂದ ಇಂದು ವಿಶ್ವವಿಖ್ಯಾತರಾಗುತ್ತಿದ್ದಾರೆ. 20ನೇ ಶತಮಾನದಲ್ಲಿ ಸಾಕಷ್ಟು ಕೃತ್ರಿಮ ಸಾಹಿತ್ಯ ಸೃಷ್ಟಿಸಿ ಸಮಾಜವನ್ನು ಪಂಚಪೀಠಾಧೀಶರು ದಿಕ್ಕು ತಪ್ಪಿಸಿ, ಗೊಂದಲ ಉಂಟುಮಾಡಿದರು. ನಿರಂತರವಾಗಿ ಗುರು ಬಸವಣ್ಣನವರಿಗೆ ಅವಮಾನ ಮಾಡುತ್ತಿದ್ದರು. "ಗುರುವಲ್ಲ, ಭಕ್ತ" ಎಂದು ಮೂದಲಿಸುತ್ತಿದ್ದರು. ಈಗ ಅವೆಲ್ಲ ನಿಂತು ಹೋಗಿವೆಯಾದರೂ ಐತಿಹಾಸಿಕ ವ್ಯಕ್ತಿಗಳಲ್ಲದ ಆದಿ ಪಂಚಾಚಾರ್ಯರನ್ನು ಸೃಷ್ಟಿಸಿ ಇತಿಹಾಸಕ್ಕೆ ಅಪಚಾರ ಮಾಡಿದ್ದಾರೆ. ಅಧ್ಯಯನಶೀಲರಾದ ಜನರು ಇದೆಲ್ಲ ಕುಚೋದ್ಯವನ್ನು ಅರಿತಿರುವರಾದರೂ ಮುಗ್ಧ ಜನರು, ಮೂಢ ಜನರು ಆದಿ ಪಂಚಾಚಾರ್ಯರನ್ನು ನಂಬಿ ಬಿಟ್ಟಿದ್ದಾರೆ. ಇದು ಸರಿಪಡಿಸಲಾರದ ಅಪಚಾರ.

ಆದರೆ ಜನರು ವಚನ ಸಾಹಿತ್ಯವನ್ನು ಓದಿದಂತೆಲ್ಲ ಪ್ರಬುದ್ಧರು, ಪ್ರಜ್ಞಾವಂತರು ಆಗುತ್ತಿದ್ದಾರೆ. ಗುರು ಬಸವಣ್ಣನವರ ಕೀರ್ತಿ ವಿಸ್ತರಿಸುತ್ತಿದೆ. ಅವರ ಸಂದೇಶಗಳು ವಿವಿಧ ಭಾಷೆಗಳಲ್ಲಿ ತರ್ಜುಮೆಗೊಳ್ಳುತ್ತಲಿವೆ. ಅವರು ಇಷ್ಟಲಿಂಗ ಜನಕರು, ಲಿಂಗಾಯತ ಧರ್ಮ ಸ್ಥಾಪಕರು ಎಂಬುದನ್ನು ಜನರು ಮನಗಾಣುತ್ತಿರುವುದರಿಂದ "ಕೈಲಾಗದವನು ಮೈ ಪರಚಿಕೊಂಡ" ಎಂಬ ಗಾದೆಯಂತೆ ಪಂಚ ಪೀಠಾಧೀಶರು ನಜ಼ರ್ ಸಮರ್ಪಣೆ ಕಾರ್ಯಕ್ರಮ ಮಾಡುತ್ತ ತಮ್ಮ ಗೌರವ ತಾವೇ ಕಳೆದುಕೊಳ್ಳುತ್ತಿದ್ದಾರೆ.

–ಮಾತಾಜಿ

ಭಾಗ-48 **ಬಸವ ವಚನಾಮೃತ** - ಮಾತಾಜಿ

1031. ಅನಾಥ ಪ್ರಜ್ಞೆ

ಆರಾರ ಮನೆಗೆ ಹೋದಡೆ, ಸಾರೆನ್ನರು; ಸರಕು ಮಾಡರು
ಆರ ಸೇರುವೆನಯ್ಯಾ, ಆರ ಹೊದ್ದುವೆನಯ್ಯಾ,
ಭಕ್ತಿಯಿಲ್ಲ - ಬಡವನೆಂದು ಒಡನೆ ನುಡಿಯರು, ಆರ ಸೇರುವೆನಯ್ಯಾ ?
ಕಾರುಣ್ಯಮೂರ್ತಿ, ನೀನಲ್ಲದೆ ಇನ್ನಾರ ಸಾರುವೆನಯ್ಯಾ
ಕೂಡಲಸಂಗಮದೇವಾ ? –ಬವದೀ. 1033

ಈ ವಚನದ ಸಂದರ್ಭ ಊಹಿಸುವುದು ಬಹುಮುಖ್ಯ. ನಮ್ಮ ಕೆಲವು ಸಾಹಿತಿಗಳ ಕೈಗೆ ಸಿಕ್ಕರೆ ಈ ವಚನವನ್ನು ಗುರು ಬಸವಣ್ಣನವರು ಗಡಿಪಾರಾಗಿ ಹೋಗುವ ಸಂದರ್ಭದಲ್ಲಿ ಹಾಕಿ, ಜನ್ಮ ಜಾಲಾಡಿ ಬಿಡುತ್ತಾರೆ. ಬಾಲಕ ಬಸವರಸ ತಾಯಿತಂದೆಯರನ್ನು ತೊರೆದು, ಪೂರ್ವಾಶ್ರಮವನ್ನು ಜರಿದು ಹೊರಡುತ್ತಾನೆ. ಜಾತ್ರೆಗೆ ಹೋದಾಗ ನೋಡಿದ ಮನೆದೇವರಾದ ಸಂಗಮನಾಥ ಆಕರ್ಷಣೆಯ ಕೇಂದ್ರ ಬಿಂದುವಾಗುತ್ತಾನೆ. ನದಿಗಳ ಸಂಗಮಸ್ಥಾನ, ಸುಂದರ ಪರಿಸರ, ಗುರುಕುಲ, ಗುರುಕುಲದ ಪೂಜ್ಯರು, ವಿದ್ಯಾರ್ಥಿವಟುಗಳು ಅಚ್ಚಳಿಯದ ಮುದ್ರೆ ಒತ್ತಿದ್ದಾರೆ. ಹೀಗಾಗಿ ಮನೆಬಿಟ್ಟು ಹೊರಟ ಬಾಲಕ ಕೂಡಲಸಂಗಮದ ಕಡೆಗೆ ಧಾವಿಸುತ್ತಾನೆ. ಬಾಗೇವಾಡಿಯಿಂದ ಸಂಗಮಕ್ಕೆ ಕಾಲ್ನಡಿಗೆಯಲ್ಲಿ ಬರಲು ಕನಿಷ್ಠ 3-4ದಿವಸಗಳಾದರೂ ಬೇಕು. ಹೀಗಾಗಿ ಆಹಾರಕ್ಕಾಗಿ ಭಿಕ್ಷೆ ಬೇಡಿದ್ದಾನೆ. ಮನೆ ಮನೆ ತಿರುಗಿದರೂ ಯಾರೂ ನೀಡದಾದಾಗ, ಕರೆದು ಉಣ್ಣಿಸದಾಗ ದುಃಖ ತುಂಬಿ ಬರುತ್ತದೆ. ಯಾರನ್ನು ಆಶ್ರಯಿಸಲಿ, ದಿಕ್ಕಿಲ್ಲದವನು ಎಂದು ಯಾರೂ ಮಾತನಾಡಿಸುತ್ತಿಲ್ಲ. ಕೊರಳಲ್ಲಿ ಜನ್ನಿವಾರವಿದ್ದಿದ್ದರೆ ಬ್ರಾಹ್ಮಣ ವಟುವೆಂದು ಬ್ರಾಹ್ಮಣರಾದರೂ ಕರೆದು ಮಾತನಾಡಿಸಿ, ಊಟವಿಕ್ಕುತ್ತಿದ್ದರು. ಜನ್ನಿವಾರವನ್ನು ನಿರಾಕರಿಸಿ ಬಂದಿರುವುದರಿಂದ ಯಾರೋ ಶೂದ್ರನೆಂದು ಸವರ್ಣೀಯರೂ ಸೇರುತ್ತಿಲ್ಲ. ಇಂಥ ದುಃಖದ ಸನ್ನಿವೇಶದಲ್ಲಿ ಬಾಲಕ ಬಸವರಸ ತನ್ನನ್ನು ತಾನೇ ಸಂತೈಸಿಕೊಳ್ಳುತ್ತಾನೆ. "ಕಾರುಣ್ಯಮೂರ್ತಿ ಕೂಡಲಸಂಗಮದೇವ ನೀನಲ್ಲದೆ ಇನ್ನಾರ ಸಾರುವೆನಯ್ಯಾ?" ಎಂದು ಶರಣಾಗತ ಭಾವದಿಂದ ಸಮಾಧಾನ ಪಟ್ಟುಕೊಳ್ಳುತ್ತಾನೆ.

1032. ಸಮಾಧಾನ ಚಿತ್ತತೆ

ಆಗದ ಕಾಲಕ್ಕೆ ಆಗೆಂದಡಾಗದು :
ಆಗಬೇಕೆಂದು ನಾ ಬೆಂಬೀಳೆನಯ್ಯಾ
ಆಗುಮಾಡುವ ತಂದೆ ನೀನು,
ಆಡಿ ಬಹ ಮಕ್ಕಳಿಗೆ ಊಡುವ ತಾಯಂತೆ
ನೋಡಿ ಸಲಹೆನ್ನ ಲಿಂಗದೇವಾ. –ಬವದೀ. 1034

ದೇವರಲ್ಲಿ ನಂಬಿಕೆ, ಶರಣಾಗತಿ ಇರಬೇಕು. ಆದರೆ ಧಾವತಿ ಇರಬಾರದು. ಏನಾದರೊಂದು ಕೆಲಸ ಆಗಬಾರದೆಂದು ದೇವರ ಇಚ್ಛೆ ಇದ್ದರೆ ನಾವು ಎಷ್ಟೇ ಧಾವತಿ ಪಟ್ಟರೂ ಅದು ಆಗದು. ಆದ್ದರಿಂದ ಅದು ಆಗಬೇಕೆಂದು ನಾನು ನಿನಗೆ ಬೆನ್ನು ಹತ್ತುವುದಿಲ್ಲ. ಮಕ್ಕಳ ಬೇಕು-ಬೇಡಗಳನ್ನು ಪೂರೈಸುವ ತಂದೆ ನೀನು ; ಆಟವಾಡಿ ಬರುವ ಮಕ್ಕಳನ್ನು ಸಂತೈಸಿ, ಊಡಿಸುವ, ಉಣ್ಣಿಸುವ ತಾಯಿಯಂತೆ ನನ್ನನ್ನು ಸಲಹು ಲಿಂಗದೇವ.

1033. ಲಿಂಗನಿಷ್ಠೆ

ಸಕಲದಲ್ಲಿ ಸನ್ನಿಹಿತರಲ್ಲದವರು
ನಿಷ್ಕಲದಲ್ಲಿ ನಿಜವನೈದುವ ಪರಿ ಎಂತಯ್ಯಾ ?
ಲಿಂಗವ ಹೋಗಾಡಿ ಪ್ರಾಣವಪ್ಪಂತೆ ನಿಮ್ಮಲ್ಲಿ ಐಕ್ಯವ ಮಾಡಾ
ಲಿಂಗದೇವಾ.
–ಬವದೀ. 1035

ವಚನವು ಅಶುದ್ಧವಾಗಿದೆ. ಬಹಳ ಕಷ್ಟಪಟ್ಟು ಹೀಗೆ ಅರ್ಥಮಾಡಬಹುದು. ಸಕಲ ಎಂದರೆ ಸಾಕಾರ, ಕುರುಹಾದ ಇಷ್ಟಲಿಂಗ. ಇದರಲ್ಲಿ ನಿಷ್ಠೆ, ಅವಧಾನ (ಎಚ್ಚರಿಕೆ) ಇಲ್ಲದವರು ನಿಷ್ಕಲನೂ ನಿರಾಕಾರನೂ ಆದ ದೇವನನ್ನು ಹೇಗೇ ಕಾಣುವರು? ಕೆಲವರು ಇಷ್ಟಲಿಂಗವನ್ನು ಬೀಳಿಸಿಕೊಳ್ಳುವರು; ಎತ್ತಿಟ್ಟೂ ಬಿಡುವರು. ಇಷ್ಟಲಿಂಗವು ಕಳೆದು ಹೋಯಿತೆಂದು ಪ್ರಾಣವನ್ನೇ ಕಳೆದುಕೊಂಡವರುಂಟು. ಈಜಾಡುವಾಗ ಇಷ್ಟಲಿಂಗ ಬಿದ್ದರೆ ಅದೇ ನೀರಲ್ಲಿ ಮುಳುಗಿ ಪ್ರಾಣ ಕಳೆದುಕೊಂಡವರ ಕಥೆಗಳುಂಟು. ಇದು ನಿಜವಾದ ಲಿಂಗೈಕ್ಯವಲ್ಲ. ನಿಷ್ಕಲದಲ್ಲಿ ನಿಜಾನಂದವನ್ನು ಹೊಂದುವದು ನಿಜವಾದ ಲಿಂಗೈಕ್ಯ. ಅಂಥ ಸ್ಥಿತಿಯನ್ನು ಪಡೆಯಬೇಕು.

1034. ಜಂಗಮಸೇವೆಯಲ್ಲೇ ಬಾಳ ಸಾರ್ಥಕ್ಯ

ಮರಹಿಂದಲಾದ ಕುರುಹಿನ ಕಾಯವ ಧರಿಸಿಕೊಂಡು ಬಂದಡೆ,
ಅದು ಎನಗೆ ಕುಂದಲ್ಲ ನೋಡು ದೇವಾ !
ನಿಮ್ಮ ಲೀಲೆಯಿಂದ ಹಿಂದಾರು ಜನ್ಮದಲ್ಲಿ ಬಂದಡೆ
ಅದು ನಿಮ್ಮ ಜಂಗಮ ಭಕ್ತಿಯಿಂದ ಕಳೆದೆ ನೋಡಯ್ಯಾ
ಕಾಯವಿಲ್ಲದ ಜಂಗಮಕ್ಕೆ ಪ್ರಾಣವಿಲ್ಲದ ಮಾಟ,
ಒಲ್ಲೆನೆಂಬುದಕ್ಕೆ ಕಾರಣವೇನು ಹೇಳಾ, ಲಿಂಗದೇವಾ. –ಬವದೀ. 1036

ಸಾಮಾನ್ಯವಾಗಿ ಜನರು ಹೀಗೆ ಚರ್ಚಿಸಿರಲಿಕ್ಕೂ ಸಾಕು. "ಗುರು ಬಸವಣ್ಣನವರು ಎಲ್ಲರಂತೆ ಹುಟ್ಟಿ ಅಸಾಮಾನ್ಯ ಸಾಧಕರಾಗಿದ್ದಾರೆ. ಅವರೂ ಮರೆವಿನ ಸೃಷ್ಟಿಯಲ್ಲಿ ಬಂದವರೆ !" ಎಂದು ಕೆಲವು ಜನರು, "ಇಲ್ಲ ಇಲ್ಲ, ಅವರು ಅರಿವಿನ ಸೃಷ್ಟಿಯಲ್ಲಿ ಹುಟ್ಟಿ ಬಂದ ಅವತಾರಿಕರು" ಎಂದು ಮತ್ತೆ ಕೆಲವರು ವಾದಿಸಿರಬಹುದು. ಅದಕ್ಕೆ ನಸುನಕ್ಕು ಈ ರೀತಿ ಧರ್ಮಪಿತರು ಉತ್ತರಿಸಿದ್ದಾರೆ. "ಒಂದು ವೇಳೆ ಮರಹಿಂದಲೇ ಹುಟ್ಟಿ ಬಂದಿದ್ದೇನೆ ಎಂದರೆ ನನಗೇನೂ ಕುಂದಿಲ್ಲ. ಏಕೆಂದರೆ ಹೇಗೆ ಹುಟ್ಟಿ ಬಂದಿರುವುದು ಎಂಬುದು ಮುಖ್ಯವಲ್ಲ ಹುಟ್ಟಿ ಬಂದು ನಾವು ಏನು ಸಾಧಿಸಿದ್ದೇವೆ ಎಂಬುದು ಮುಖ್ಯ" ಮಾನವ ದೇಹವೇ ಮರೆವಿನ ಚೋಹ. ನನಗೆ ಗೊತ್ತು ದೇವನ ಲೀಲೆಯಿಂದ ನಾನು ಹಿಂದೆ ಆರು ಗಣಾಧೀಶ್ವರರ ಜನ್ಮದಲ್ಲಿ ಹುಟ್ಟಿ ಬಂದಿದ್ದೇನೆ. ಆ ಆರೂ ಜನ್ಮಗಳನ್ನು ಜಂಗಮಸೇವೆಯಲ್ಲೇ ಕಳೆದಿದ್ದೇನೆ. ಈಗಲಾದರೂ ಅಷ್ಟೆ. ನನ್ನ ದೃಷ್ಟಿಯಲ್ಲಿ ಜಂಗಮ ಎಂದರೆ ಸಮಾಜ, ಅದರ ಸೇವೆಯಲ್ಲೇ ಜೀವನದ ಸಾರ್ಥಕ್ಯ. ಆದ್ದರಿಂದ ಎಷ್ಟು ಜನ್ಮಗಳನ್ನಾದರೂ ಎತ್ತಿ ಜಂಗಮಸೇವೆ ಮಾಡುತ್ತೇನೆ. ಜನ್ಮ ಎತ್ತಲು ಒಲ್ಲೆ ಎನ್ನುವುದಕ್ಕೆ ಕಾರಣವೇ ಇಲ್ಲ.

1035. ಶರಣರ ಮುನಿಸು ತಾಳಬಾರದು

ಚಂದ್ರನು ಅಮೃತಕರನಾದಡೇನಯ್ಯಾ
ಒಳಗಣ ಕಳಂಕ ಬಿಡದನ್ನಕ್ಕರ ?
ಸೂರ್ಯ ಮಹಾಪ್ರಕಾಶನಾದಡೇನಯ್ಯಾ,
ಅಸ್ತಮಾನಕ್ಕೆ ಅಸ್ತಂಗತನೆಂಬ ಹೀನ ಬಿಡದನ್ನಕ್ಕರ
ಆನು ನಿಮ್ಮ ಕೃಪೆಯ ಹಡೆದು ಫಲವೇನಯ್ಯಾ
ನಿಮ್ಮ ಶರಣರು ಎನ್ನ ಮೇಲೆ ಮುನಿದು ಹೋದ ಬಳಿಕ]
ಲಿಂಗದೇವಯ್ಯಾ, ನಿಮ್ಮ ಶರಣರ ಮನದಲ್ಲಿ
ಎನ್ನ ಮೇಲೆ ಕರುಣ ಹುಟ್ಟಿ ಬಪ್ಪಂತೆ ಮಾಡಯ್ಯಾ –ಬವದೀ. 1037

ಚಂದಿರನು ತಂಪಾದ ಕಿರಣಗಳನ್ನು ಸೂಸುವ ಕಾರಣ ಅವನನ್ನು ಅಮೃತಕರ ಎನ್ನಲಾಗುವುದು. ಚಂದ್ರನ ಬೆಳಕನ್ನು ಇಷ್ಟಪಡದವರೇ ಇಲ್ಲ. ಆದರೇನಂತೆ ಶುಭ್ರವಾಗಿ ಬೆಳಗುವ ಚಂದ್ರನ ಗರ್ಭದಲ್ಲಿ ಸುಂದರ ಮುಖದೊಳಗಣ ಮೊಡವೆಯಂತೆ ಕಂಧು ಬಣ್ಣದ ಕಲೆ ಇದೆ. (ಅವು ಕುಳಿಗಳೆಂದು ಸಂಶೋಧನೆಯಿಂದ ಸಾಬೀತಾಗಿದೆ.) ಅದೊಂದು ಕಳಂಕವಾಗಿ ಕಾಡುತ್ತಲಿದೆ. ಸೂರ್ಯನು ಮಹಾಪ್ರಕಾಶದಿಂದ ಕೂಡಿದವನು; ಅವನ ಬೆಳಕಿನಲ್ಲೇ ಚರಾಚರದ ಚಟುವಟಿಕೆಯೆಲ್ಲ ಸಾಗಿದೆ. ಆದರೇನಂತೆ ರಾತ್ರಿಯಾಗುತ್ತಲೇ ಅಸ್ತಂಗತನಾಗುತ್ತಾನೆ ಎಂಬ ಅಪವಾದಕ್ಕೆ ಈಡಾಗಿದ್ದಾನೆ. ಹಾಗೆ ಲಿಂಗದೇವಾ, ನಾನು ನಿಮ್ಮ ಅನುಗ್ರಹಕ್ಕೆ ಪಾತ್ರನಾಗಿದ್ದೇನೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಶರಣರು

ನನ್ನ ಮೇಲೆ ಮುನಿದು ಹೋಗಿದ್ದಾರೆ ಎಂಬುದು ನನಗೆ ತೀರಾ ವ್ಯಥೆಯನ್ನು ಉಂಟು ಮಾಡುವ ಸಂಗತಿ. ದೇವಾ, ನಿಮ್ಮ ಶರಣರ ಮನದಲ್ಲಿ ಕರುಣೆ ಹುಟ್ಟಿ ಮರಳಿ ಬರುವಂತೆ ಮಾಡು ಎಂದು ಪ್ರಾರ್ಥಿಸುತ್ತೇನೆ.

ಧರ್ಮಪಿತರ ಜೀವನದಲ್ಲಿ ಶರಣರು ಮುನಿದು ಹೋದ ಪ್ರಸಂಗ ಎರಡು ಬಾರಿ. ಒಂದು, ಕಿನ್ನರಿ ಬ್ರಹ್ಮಣ್ಣನ ಉಳ್ಳಾಗಡ್ಡೆ ಪ್ರಸಂಗ. ಇನ್ನೊಂದು ಪ್ರಭುದೇವರ ಪೀಠಾರೋಹಣದಲ್ಲಿ ಅಸಹನೆಯಿಂದ "ಜಂಗಮರು" ಮುನಿದು ಹೋಗುವ ಪ್ರಸಂಗ. ಶೂದ್ರಾತಿ ಶೂದ್ರ ಕುಲದಲ್ಲಿ ಹುಟ್ಟಿದ ಓರ್ವನನ್ನು ಶೂನ್ಯ ಪೀಠಕ್ಕೆ ಆರೋಹಣ ಮಾಡಿಸಿದ್ದು ಮೇಲ್ಜಾತಿಯ ಸಾಧಕರಿಗೆ (ಆಂಧ್ರದ ವೀರಶೈವರಲ್ಲಿ ಬ್ರಾಹ್ಮಣ ಗೃಹಸ್ಥನನ್ನು ಮಾಹೇಶ್ವರನೆಂದು, ಬ್ರಾಹ್ಮಣ ಸನ್ಯಾಸಿಯನ್ನು ಜಂಗಮನೆಂದು ಕರೆಯಲಾಗುತ್ತಿತ್ತು.) ಅರ್ಥಾತ್ ಜಂಗಮರಿಗೆ ಅಸಹನೆಯನ್ನು ಉಂಟು ಮಾಡಿತ್ತು. ಅವರು ಊಟ ಮಾಡದೆ ಪ್ರತಿಭಟಿಸಿ ಹೋಗುತ್ತಾರೆ. ಆಗ ಮಾಚಿದೇವರು "ಅಂಥ(ಜಾತಿವಾದಿಗಳ)ವರ ವಿರೋಧವನ್ನು ಲೆಕ್ಕಿಸಬಾರದು" ಎಂದು ಬಸವಣ್ಣನವರಿಗೆ ಸಾಂತ್ವನ ಹೇಳುತ್ತಾರೆ.

ಕಿನ್ನರಿ ಬೊಮ್ಮಣ್ಣನ ಪ್ರಸಂಗವನ್ನು ಈಗಾಗಲೇ ಪ್ರಸ್ತಾಪಿಸಿದ್ದೇನೆ. ಗುರು ಬಸವಣ್ಣನವರ ಮಹಾಮನೆಯ ಪಾಕಶಾಲೆಯೊಳಕ್ಕೆ ನೀರುಳ್ಳಿ (ಬೆಳ್ಳುಳ್ಳಿ)ಗೆ ಪ್ರವೇಶ ಸಿಕ್ಕಿರಲಿಲ್ಲ. ಬಹುಶಃ ಧರ್ಮಪಿತರು ಬ್ರಾಹ್ಮಣ ಮೂಲದಿಂದ ಬಂದುದರಿಂದ ನೀರುಳ್ಳಿ, ಬೆಳ್ಳುಳ್ಳಿಗಳು ರಾಜಸ ಪದಾರ್ಥವೆಂದು ನಿಷೇಧಿಸಲ್ಪಟ್ಟಿರಬಹುದು. ಶೂದ್ರ ಮೂಲದಿಂದ ಬಂದ ಕಿನ್ನರಿ ಬ್ರಹ್ಮಣ್ಣ ನಂಜಿಕೊಳ್ಳಲು ಉಳ್ಳಾಗಡ್ಡೆಯನ್ನು ತಂದು ಇಟ್ಟುಕೊಂಡಿದ್ದ. ಧರ್ಮಪಿತರು ಸಹಜವಾಗಿ ಹಾಯ್ದು ಹೋಗುವಾಗ ನೀರುಳ್ಳಿ ವಾಸನೆ ಗ್ರಹಿಸಿ, "ಈ ನಿಷಿದ್ಧ ಪದಾಥವನ್ನು ತಂದಿಟ್ಟವರು ಯಾರು ? ಇದನ್ನು ಆಚೆಗೆ ಬೀಸಾಡಿರಿ" ಎಂದು ಹೇಳಿ ಹೋಗಿ ಬಿಟ್ಟರು. ಇದನ್ನು ತಿಳಿದ ಕಿನ್ನರಿ ಬ್ರಹ್ಮಣ್ಣ ನೊಂದುಕೊಂಡ. ತನ್ನ ಶೂದ್ರತ್ವವನ್ನು ಎತ್ತಿ ಆಡಿದಂತೆ ಆತನಿಗೆ ಭಾಸವಾಗಿರಬೇಕು. ಆಗ ಆತ ಮುನಿಸಿಕೊಂಡು ಕೆಲವು ಶರಣರೊಡನೆ ಮಹಾಮನೆಯನ್ನು ತೊರೆದು ಹೋಗಿಬಿಡುತ್ತಾನೆ.

ಅರಮನೆಯ ಬೆಳಗಿನ ಕಲಾಪ ಮುಗಿಸಿಕೊಂಡು ಬಂದು ಮಧ್ಯಾಹ್ನದ ಪೂಜೆ, ಪ್ರಸಾದ ಮುಗಿಸಿ ಕಿನ್ನರಿ ಬ್ರಹ್ಮಣ್ಣನ ಕಿನ್ನರಿಯ ಸಂಗೀತವನ್ನು ಕೇಳುವ ಪರಿಪಾಠವನ್ನು ಧರ್ಮಪಿತರು ಇಟ್ಟುಕೊಂಡಿದ್ದರು. ಅಂದು ಮಧ್ಯಾಹ್ನ ಕಿನ್ನರಿಯ ಧ್ವನಿಯೇ ಇಲ್ಲ. ಏಕೆಂದು ವಿಚಾರಿಸಿದಾಗ ಆತ ಮುನಿದು ಹೋದ ಸಂಗತಿ ತಿಳಿಯುತ್ತದೆ. ಆಗ ಹೇಳಿದ ವಚನವಿದು. "ಲಿಂಗದೇವಾ, ನಿಮ್ಮ ಶರಣರ ಮನದಲ್ಲಿ ಎನ್ನ ಮೇಲೆ ಕರುಣ ಹುಟ್ಟಿ ಮತ್ತೆ ಬರುವಂತೆ ಮಾಡು" ಎಂದು ದೇವರಲ್ಲಿ ಬೇಡುತ್ತಾರೆ.

(ಕಿನ್ನರಿ ಬ್ರಹ್ಮಣ್ಣನಿಂದಾಗಿ ಇಂದು ನಮಗೆಲ್ಲ ನೀರುಳ್ಳಿ, ಬೆಳ್ಳುಳ್ಳಿ ತಿನ್ನುವ ಅವಕಾಶ ಸಿಕ್ಕಿದೆಯಲ್ಲವೆ ? ಈ ಪ್ರಸಂಗದಿಂದ ಧರ್ಮಗುರುವು ಅಂತರಾವಲೋಕನ ಮಾಡಿಕೊಂಡರು. "ನಿಜ, ಈರುಳ್ಳಿ, ಬೆಳ್ಳುಳ್ಳಿ ಮಾಡಿರುವ ಅಪರಾಧ ಏನು?" ಆಯುರ್ವೇದದಲ್ಲಿ ಅವಕ್ಕೆ ಗಣ್ಯಸ್ಥಾನ ನೀಡಲಾಗಿದೆ. ನನ್ನ ಬ್ರಾಹ್ಮಣ ವಾಸನೆ ಇನ್ನೂ ಪೂರ್ಣವಾಗಿ ಅಳಿದಿಲ್ಲ. ಉಳ್ಳಾಗಡ್ಡೆಯನ್ನು ಹಳಿಯುವ ಮೂಲಕ ಶರಣರ ಮೂಲವನ್ನು ಎತ್ತಿ ಆಡಿದೆ." ಹೀಗೆ ಪಶ್ಚಾತ್ತಾಪಪಟ್ಟು ಬ್ರಹ್ಮಣ್ಣನನ್ನು ಹುಡುಕಿಸುವರು. ಆತ ಇರುವ ಸ್ಥಳವನ್ನು ಪತ್ತೆ ಹಚ್ಚಿ (ಬೀದರ್-ಗುಲಬರ್ಗಾ ಹೆದ್ದಾರಿಯ ಮೇಲಿರುವ ಹಳ್ಳಿಖೇಡ) ತಾವೇ ಹೋಗುವರು. ಎತ್ತಿನ ಗಾಡಿಗೆ ನೀರುಳ್ಳಿಯ ಅಲಂಕಾರ ಮಾಡುವರು. ಎತ್ತುಗಳಿಗೆ ಉಳ್ಳಾಗಡ್ಡೆಯ ಮಾಲೆ ಹಾಕುವರು. ತಾವೇ ಮುಂದಾಗಿ ಹೋಗಿ ಕ್ಷಮೆ ಕೇಳಿಕೊಂಡು ಶರಣರನ್ನು ಕರೆತರುವರು. ಶರಣರನ್ನು ಧರ್ಮಪಿತರು ಅದೆಷ್ಟು ಪ್ರೀತಿಸುತ್ತಿದ್ದರು. ಒಬ್ಬರನ್ನು ಸಹ ಕಳೆದುಕೊಳ್ಳಲು ಅವರು ಇಷ್ಟಪಡುತ್ತಿರಲಿಲ್ಲ ಎಂಬುದು ಇದರಿಂದ ಮನವರಿಕೆಯಾಗುತ್ತದೆ. ಹೀಗಾಗಿಯೇ ಶರಣರು ಬೆಲ್ಲಕ್ಕೆ ಇರುವೆ ಮುತ್ತುವಂತೆ ಅವರ ಸುತ್ತ ಸಮಾವೇಶವಾದರು.

1036. ಶರಣರ ಸಂಗದ ಮಹಿಮೆ

ಅಯ್ಯಾ, ನಿಮ್ಮ ಶರಣರ ಸಂಗ ಸುಖವ ಏನೆಂದುಪಮಿಸುವುವೆನಯ್ಯಾ !
ನಿಮ್ಮ ಶರಣರ ಕೂಡೆ ಸಮಗೋಷ್ಠಿಯ
ಮಾಡುವುದನುಪಮಿಸಲಮ್ಮೆನಯ್ಯಾ,
ಲಿಂಗದೇವಾ, ನಿಮ್ಮ ಪ್ರಮಥರೆಲ್ಲರೂ
ನೆರೆದ ಗಣತಿಂಥಿಣಿಯೊಳಗೆನ್ನನೇನೆಂದರಿಯದೆ
ಅಗಲದಂತಿರಿಸಯ್ಯಾ. ನಾ ನಿಮ್ಮ ಧರ್ಮದ ಕವಿಲೆ ! –ಬವದೀ. 1038

ಲಿಂಗದೇವಾ, ನಿಮ್ಮ ಶರಣರ ಸಂಗದಲ್ಲಿ ಸಿಕ್ಕುವ ಸುಖವನ್ನು ಯಾವ ರೀತಿ ನಾನು ವರ್ಣಿಸಲಿ ? ಶರಣರ ಜೊತೆಗೆ ಸಮಗೋಷ್ಠಿಯ ಮಾಡುವುದನ್ನು ಹೇಳಲು ನನಗೆ ಶಬ್ದಗಳು ಸಾಲವು. (ಸಮಗೋಷ್ಠಿ ಎಂಬ ಪದ ವಿಶಿಷ್ಟವಾದುದು. ಇಲ್ಲಿ ಒಬ್ಬರು ಉಪನ್ಯಾಸಕರು, ಉಳಿದವರು ಶ್ರೋತೃಗಳು ಇರುವುದಿಲ್ಲ. ಎಲ್ಲರೂ ಸಮಭಾಗಿಗಳು, ಚಿಂತನ ಮಂಥನ ಮಾಡುವವರು.) ನಿಮ್ಮ ಶರಣರೆಲ್ಲರೂ ನೆರೆದ ಗಣ ತಿಂಥಿಣಿಯೊಳಗೆ ನಾನಿದ್ದರೆ ನನಗೆ ಬಹಿರಂಗದ ಪ್ರಜ್ಞೆಯೇ ಇರದು. ಇಂಥ ಶರಣರ ಸಂಗದಿಂದ ಅಗಲದಂತೆ ನನ್ನನ್ನು ಇರಿಸು; ನಾನು ನಿಮ್ಮ ಧರ್ಮದ ಕವಿಲೆ. ನನ್ನನ್ನು ರಕ್ಷಿಸು. [ದೇವಸ್ಥಾನಗಳಿಗೆ ಹಸುಗಳನ್ನು, ಹೋರಿಗಳನ್ನು ಹರಸಿಕೊಂಡು ಬಿಡುವರು. ಅವುಗಳಿಗೆ ಎಲ್ಲರೂ ಆಹಾರ ಕೊಡುವರು. ಯಾರೂ ಹೊಡೆಯುವುದಿಲ್ಲ.] "ಹಾಗೆ ನನ್ನನ್ನು ಶರಣರು ಪ್ರೀತಿಯಿಂದ ಕಾಣುವಂತಾಗಲಿ ; ಜ್ಞಾನದ ಆಹಾರವನ್ನು ಎಲ್ಲರೂ ಅಷ್ಟಿಷ್ಟು ಕೊಟ್ಟು ಪೋಷಿಸಲಿ" ಎಂದು ಲಿಂಗದೇವನಲ್ಲಿ ಬೇಡುತ್ತಾರೆ.

1037. ಶರಣರ ಅಗಲಿಕೆ

ನಿಮ್ಮ ನೋಡಲೆನ್ನ ಹರಣವಿದ್ದುದ ಕಂಡೆ ;
ನಿಮ್ಮನಗಲಲೊಡನೆ ಎನ್ನ ಹರಣವಿಲ್ಲಯ್ಯಾ
ಇರುಳೊಂದು ಜುಗ ಮೇಲೆ ಕಿಡೆದಂತೆ ಆಳವಾಡಿ ಕಳೆವೆನಯ್ಯಾ
ಹಗಲೆಲ್ಲ ಹಂಬಲಿಸಿ ಹಲುಬಲೇನಯ್ಯಾ
ಲಿಂಗದೇವನ ಶರಣರನಗಲುವ ಧಾವತಿಯಿಂದ
ಮರಣವೇ ಲೇಸಯ್ಯಾ –ಬವದೀ. 1039

ಈ ವಚನ ಒಂದು ಐತಿಹಾಸಿಕ ಘಟನೆಯನ್ನು ದೃಢೀಕರಿಸುತ್ತದೆ. ಅದು ನಾನು ನಿಶ್ಚಿತವಾಗಿಯೂ ಹೇಳುವಂತೆ ಗಡಿಪಾರು. ಕೆಲವು ಸಾಹಿತಿಗಳು, ಬರಹಗಾರರು ಕಲ್ಯಾಣದಲ್ಲಿ ವಿಪ್ಲವವಾಗುತ್ತಲೇ ಗುರು ಬಸವಣ್ಣನವರು ಕೂಡಲ ಸಂಗಮಕ್ಕೆ (ಹೇಡಿಯಂತೆ) ಹೊರಟುನಿಂತರು ಎಂದು ಬರೆಯುತ್ತಾರೆ. ಅದು ತಪ್ಪು. ಒಂದು ಅನಿವಾರ್ಯ ಪರಿಸ್ಥಿತಿಗೆ ಸಿಕ್ಕಿ ಧರ್ಮಪಿತರು ಕಲ್ಯಾಣವನ್ನು ತೊರೆಯಬೇಕಾಯಿತು ಎಂಬುದಕ್ಕೆ ಕೆಲವು ವಚನಗಳು ಸಾಕ್ಷಿಯಾಗುತ್ತವೆ. ಹಾಗೆ ಹೊರಟಾಗ ಶರಣರನ್ನು ಅಗಲುವ ನೋವನ್ನು ಗುರುದೇವರು ತೀವ್ರವಾಗಿ ಅನುಭವಿಸಿದರು. "ಲಿಂಗದೇವಾ ನನ್ನ ಬದುಕಿನ ಜೀವಾಳ ಲಿಂಗಪೂಜೆ ಹಾಗೂ ಶರಣರ ಸಂಗ. ಈಗ (ಗಡಿಪಾರಾಗಿ ಬಂದಿರುವಾಗ) ಲಿಂಗಪೂಜೆ ನನಗೆ ಲಭ್ಯ. ನಿಮ್ಮನ್ನು ದೃಷ್ಟಿಸಿ ನೋಡಿ ಸಮಾಧಾನ ಪಟ್ಟುಕೊಳ್ಳುತ್ತೇನೆ." ಅದರಲ್ಲೇ ನನ್ನ ಪ್ರಾಣವಿದೆ. ನಿಮ್ಮನ್ನು ಮರೆತರೆ ನನ್ನ ಪ್ರಾಣವೇ ಹೋಗುತ್ತದೆ. ಹಗಲು ರಾತ್ರಿಗಳು ಬಹುಭಾರವಾಗಿವೆ. ರಾತ್ರಿಯನ್ನು ಕಳೆಯುವುದು ಒಂದು ಯುಗವನ್ನೇ ಕಳೆದಷ್ಟು ದೀರ್ಘ ಎನಿಸುತ್ತದೆ. ಹಗಲಿಡೀ ಶರಣರ ಸಂಗವಿಲ್ಲದೆ ಹಂಬಲಿಸಿ ಹಲುಬುತ್ತೇನೆ.

ಶರಣರನ್ನು ಅಗಲುವ ನೋವಿಗಿಂತಲೂ ಸಾಯುವುದೇ ಲೇಸೆನಿಸುತ್ತದೆ. ಶರಣರೊಡನೆ ಕಳೆದವು ಎಂಥಾ ಮಧುರ ಕ್ಷಣಗಳು. ಅವು ಈಗ ಇಲ್ಲವಲ್ಲಾ ಎಂಬ ವ್ಯಥೆ ಕಾಡುತ್ತಿದೆ."

1038. ಕಿನ್ನರಿ ಬ್ರಹ್ಮಣ್ಣನ ನಿಧನಕ್ಕೆ ಸಂತಾಪ

ಅಯ್ಯಾ, ಎನ್ನ ಕೈಯ ದರ್ಪಣ ಸಂದಿತ್ತು;
ಆಸ್ಥಾನದ ಜ್ಯೋತಿ ನಂದಿತ್ತು ;
ಸರಸ್ವತಿಯ ಭಂಡಾರ ಸೂರೆಹೋಯಿತ್ತು;
ನಮ್ಮಯ್ಯ ಕಿನ್ನರಬೊಮ್ಮಣ್ಣ ಹೋದನು;
ತಾರಾಮಂಡಲದಲ್ಲಿ ಕೇಳಿಸುವ ತಂದೆ ಹೋದನು
ನಾನೆಲ್ಲಿ ಅರಸುವೆನು ಲಿಂಗದೇವಯ್ಯಾ,
ತನ್ನಾಳು ಕಿನ್ನರಿಬೊಮ್ಮಣ್ಣನನೊಯ್ದಡೆ ನಾನೆಲ್ಲಿ ಅರಸುವೆನು ? –ಬವದೀ. 1040

ಬಹಳಷ್ಟು ವಚನಗಳಲ್ಲಿ ಐತಿಹಾಸಿಕ ದಾಖಲೆಗಳು, ಸತ್ಯಗಳು ಸಿಕ್ಕುತ್ತವೆ. ಈ ವಚನದಲ್ಲಿ ಗುರು ಬಸವಣ್ಣನವರು ಕಲ್ಯಾಣದಲ್ಲಿ ಇರುವಾಗಲೇ ಕಿನ್ನರಿ ಬ್ರಹ್ಮಣ್ಣ ಲಿಂಗೈಕ್ಯರಾದಂತೆ ಭಾಸವಾಗುತ್ತದೆ. ಉಳವಿಯವರೆಗೂ ಕಿನ್ನರಿ ಬ್ರಹ್ಮಣ್ಣ ಬಂದಿದ್ದರು. ಉಳವಿಯ ಮಹಾಮನೆ ಬಳಿ ಹರಿಯುವ ಹಳ್ಳವನ್ನು ಗವಿಯೊಳಕ್ಕೆ ಹರಿಯುವಂತೆ ಮಾಡಿದರು. ಅದಕ್ಕಾಗಿ ಹಳ್ಳಕ್ಕೆ ಕಿನ್ನರಯ್ಯನ ಹಳ್ಳ ಎಂದು ಹೆಸರಿಸಲಾಯಿತು

ಎಂದು ನಾನು ಓದಿದ್ದೆ. ಮೇಲಿನ ವಚನದಿಂದ ಕಿನ್ನರಯ್ಯ ಕಲ್ಯಾಣದಲ್ಲೇ ಲಿಂಗೈಕ್ಯರಾದಂತೆ ತೋರುತ್ತದೆ. ಅವರು ಪ್ರೀತಿ ಪಾತ್ರ ಶರಣರಾದ್ದರಿಂದ ಮಹಾಮನೆಯ ಗವಿಯ ಬಳಿಯ ಹಳ್ಳಕ್ಕೆ ಕಿನ್ನರಯ್ಯನ ಹಳ್ಳ ಎಂದು ಶರಣರು ಹೆಸರಿಟ್ಟಿದ್ದಾರೆ. ಹರಳಯ್ಯನ ಚಿಲುಮೆ ಎಂಬ ವಿಶೇಷವಾದ ನೀರಿನ ಝುರಿಯು ಉಳವಿಯ ಅರಣ್ಯದಲ್ಲಿದೆ. ನಾವೊಮ್ಮೆ ಹೋದಾಗ ಏನಿದರ ಮಹತ್ವ ? ಎಂದು ಮಾರ್ಗದರ್ಶಿ(ಗೈಡ್)ಯೊಬ್ಬನನ್ನು ಕೇಳಿದಾಗ "ಇಲ್ಲಿ ಹರಳಯ್ಯನವರು ಕುಳಿತು ಚಿಲುಮೆ ಸೇದಿದ್ದರು" ಎಂದು ಹೇಳಿದಾಗ ನಾವು ಮೂರ್ಛೆ ಹೋಗುವುದೊಂದೆ ಬಾಕಿ. ಅಷ್ಟು ಅಜ್ಞಾನಿಗಳು ಅವರು. ಹರಳಯ್ಯನವರು ಹುತಾತ್ಮರಾದರು. ಅವರು ಶರಣರಿಗೆ ಬಹಳ ಪ್ರಿಯವಾದವರಾಗಿದ್ದರಿಂದ ಅವರ ಬಲಿದಾನದ ನೆನಪು ಸದಾ ಕಾಡುತ್ತಿದ್ದುದರಿಂದ ಅವರ ಹೆಸರನ್ನು ನೀರಿನ ಝುರಿಗೆ ಇಡಲಾಗಿದೆ.)

ನನ್ನ ಕೈಯೊಳಗಿನ ಕನ್ನಡಿಯಂತೆ ಕಿನ್ನರಯ್ಯ ಇದ್ದರು. ಕನ್ನಡಿ ಹೇಗೆ ನಮ್ಮ ಓರೆಕೋರೆಗಳನ್ನು, ಅಂದ ಚೆಂದಗಳನ್ನು ತೋರಿಸುತ್ತದೋ ಹಾಗೆ ನನ್ನ ಒಳ್ಳಿತು ಕೆಡುಕುಗಳನ್ನು ತೋರಿಸುವಂತೆ ಬ್ರಹ್ಮಣ್ಣ ಇದ್ದರು. ಮಹಾಮನೆಯ ಅನುಭವ ಮಂಟಪದ ಆಸ್ಥಾನದ ಜ್ಯೋತಿಯಂತೆ ತನ್ನ ನಾದ ಮಾಧುರ್ಯದಿಂದ ಬೆಳಗುತ್ತಿದ್ದರು. ಸರಸ್ವತಿಯ ಭಂಡಾರ ಸೂರೆ ಹೋದಂತೆ ಜ್ಞಾನ ಭಂಡಾರವಾಗಿದ್ದ ಕಿನ್ನರಯ್ಯ ಅಗಲಿಬಿಟ್ಟರು. ನಮ್ಮಯ್ಯ ಕಿನ್ನರಿಬ್ರಹ್ಮಯ್ಯ ಹೋಗಿಬಿಟ್ಟರು. ತನ್ನ ಕಿನ್ನರಿಯ ದನಿಯಿಂದ ನಮ್ಮನ್ನು ತಾರಾಮಂಡಲಕ್ಕೆ ಕರೆದೊಯ್ಯುತ್ತಿದ್ದ ತಂದೆ ಹೋದನು. ಇನ್ನು ಆತನನ್ನು ಎಲ್ಲಿ ಹುಡುಕಲಿ? ಎಂದು ಗುರು ಬಸವಣ್ಣನವರು ಪರಿತಪಿಸುತ್ತಾರೆ. "ಲಿಂಗದೇವಯ್ಯ ತನ್ನಾಳು ಕಿನ್ನರಿ ಬೊಮ್ಮಣ್ಣನನೊಯ್ದಡೆ ನಾನೆಲ್ಲಿ ಅರಸುವೆನು?' ಎಂಬ ವಾಕ್ಯ, ಒಯ್ದಡೆ ಎಂಬ ಪದಪ್ರಯೋಗ ಕಿನ್ನರಿ ಬ್ರಹ್ಮಣ್ಣನ ಲಿಂಗೈಕ್ಯವನ್ನು ಖಚಿತಪಡಿಸುತ್ತದೆ.

1039. ಪ್ರಭುದೇವರ ನಿರೀಕ್ಷೆಯಲ್ಲಿ

ಮನದೊಡೆಯ ಮನೆಗೆ ಬಂದಡೆ ಕನಕದ ತೋರಣವ ಕಟ್ಟಿ
ಷಡುಸಮ್ಮಾರ್ಜನೆಯ ಮಾಡಿ, ರಂಗವಾಲಿಯನಿಕ್ಕಿ,
ಉಘೆ, ಚಾಂಗು, ಭಲಾ ಎಂಬೆನು. ಲಿಂಗದೇವಾ,
ನಿಮ್ಮ ಶರಣ ಪ್ರಭುದೇವರು ಬಂದಡೆ
ಉಬ್ಬಿ ಕೊಬ್ಬಿ ನಲಿನಲಿದಾಡುವೆ. –ಬವದೀ. 1041

ಅಲ್ಲಮ ಪ್ರಭುದೇವರು ಸಂಚರಿಸುತ್ತ ಸಿದ್ಧರಾಮೇಶ್ವರರ ಕೂಡಿ ಬರುವ ವಾರ್ತೆ ಗುರು ಬಸವಣ್ಣನವರನ್ನು ತಲುಪುತ್ತಿದೆ. ಅವರ ಸಂತೋಷ ಹೇಳತೀರದಷ್ಟು ಎಂಥಾ ವ್ಯಕ್ತಿಯ ಬರವಿಗಾಗಿ ಅವರು ಹಾತೊರೆಯುತ್ತಿದ್ದರೋ ಅನುಭವ ಮಂಟಪ ಕಟ್ಟಿ ಶೂನ್ಯ ಪೀಠ ಸ್ಥಾಪಿಸಿ ಅದಕ್ಕೆ ಸೂಕ್ತ ಅಧಿಕಾರಿ ಬೇಕೆಂದು ಹಂಬಲಿಸುತ್ತಿದ್ದರೋ ಅಂಥ ವ್ಯಕ್ತಿ ಬರುತ್ತಲಿದ್ದಾರೆ "ಆತನೆ ನನ್ನ ಮನದೊಡೆಯ" ಎನ್ನುತ್ತಾರೆ ಧರ್ಮಪಿತರು. "ಎನ್ನ ಮನದೊಡೆಯ ಮನೆಗೆ ಬಂದರೆ ಬಂಗಾರದ ತೋರಣವನ್ನು ಕಟ್ಟಿ ಮನೆಯನ್ನೆಲ್ಲ ಒಪ್ಪವಾಗಿ ಸಾರಿಸಿ, ರಂಗವಾಲಿಯಿಂದ ನೆಲವನ್ನೆಲ್ಲ ಅಲಂಕರಿಸಿ ಬಂದಾಗ ಉಘೆ, ಚಾಂಗುಭಲಾ ಎಂದು ಜಯಘೋಷ ಮಾಡುವೆನು ಲಿಂಗದೇವಾ, ನಿಮ್ಮ ಶರಣ ಪ್ರಭುದೇವರು ಬಂದಡೆ ಉಬ್ಬಿ ಕೊಬ್ಬಿ ನಲಿದಾಡುವೆ" ಎಂದು ಸಂಭ್ರಮಿಸುವರು.

1040. ಪ್ರಭುದೇವರ ಬರವಿಗಾಗಿ ಹಂಬಲ

ಹಸಿದಳುವ ಶಿಶುವಿಂಗೆ ಮೊಲೆಯ ಕೊಟ್ಟಡೆ
ಆ ಶಿಶು ಜೀವಿಸದಿಪ್ಪುದೇ ಹೇಳಾ, ಅಯ್ಯಾ ?
ಪ್ರಾಣವಲ್ಲಭನ ಅಗಲಿಕೆಯಿಂದ ಪ್ರಾಣವಿಯೋಗವಾಗಿಹ
ಹೆಂಗೂಸಿಗೆ ಆ ಪ್ರಾಣವಲ್ಲಭ ಬಂದಡೆ
ವಿರಹ ಸಂತವಿಸದಿಪ್ಪುದೆ ಹೇಳಾ, ಅಯ್ಯಾ ?
ಲಿಂಗದೇವರು ಸಾಕ್ಷಿಯಾಗಿ
ಪ್ರಭುವೆನ್ನ ಮನೆಗೆ ಬಂದಡೆ ಎನ್ನ ಬಯಕೆ ಕೈಸಾರಿ
ಚನ್ನಬಸವಣ್ಣನ ಕರುಣದ ಕಂದನಾಗಿ ಉಳಿದೆನು
ಕಾಣಾ ಮಡಿವಾಳಯ್ಯಾ. –ಬವದೀ. 1042

ಹಸಿದು ಹಾಲಿಗಾಗಿ ಅಳುವ ಮಗುವಿಗೆ ತಾಯಿ ಧಾವಿಸಿ ಎದೆಹಾಲು ಕೊಟ್ಟರೆ ಆ ಮಗುವಿಗೆ ಪುನರ್ಜನ್ಮ ಬರದೆ ಇರುವುದೆ? ಪ್ರಾಣ ಪ್ರಿಯನಾದ ಪತಿಯ ಅಗಲಿಕೆಯಿಂದ ಪ್ರಾಣಹೋಗುವ ಸ್ಥಿತಿಗೆ ಬಂದ ಪತ್ನಿಗೆ ಗಂಡನು ಬಂದ ಸುದ್ದಿ ಕೇಳಿದರೆ ವಿರಹ ಇಳಿದುಹೋಗಿ ಪುನಃ ಚೈತನ್ಯ ಬರದೆ ಇರುವುದೆ? ಹಾಗೆ, ಲಿಂಗದೇವರು ಸಾಕ್ಷಿಯಾಗಿ ಪ್ರಭುದೇವರು ಆಗಮಿಸಿದರೆ ನನಗೆ ಪುನರ್ಜನ್ಮ ಬಂದಂತಾಗುವುದು. ನನ್ನ ಬಹುದಿನದ ಬಯಕೆ ಕೈಸಾರಿ ಆನಂದದ ಮಹಾಪೂರವೇ ಹರಿಯುವುದು. ಚಿನ್ಮಯಜ್ಞಾನಿ ಚನ್ನಬಸವಣ್ಣನ ಕರುಣದ ಕಂದನಾಗಿ ಉಳಿಯುತ್ತೇನೆ ಮಡಿವಾಳ ಮಾಚಿದೇವರೆ.

1041. ಶರಣರ ಬರುವೆ ಜೀವಾಳ

ಸಮುದ್ರಕ್ಕೆ ಚಂದ್ರಮನ ಬರವೆ ಜೀವಾಳವಯ್ಯಾ;
ಕೆರೆಯ ಕಮಲಕ್ಕೆ ಉದಕವೆ ಜೀವಾಳವಯ್ಯಾ
ಚಕೋರಂಗೆ ಚಂದ್ರಮನ ಬರವೆ ಜೀವಾಳವಯ್ಯಾ
ಲಿಂಗದೇವಾ,
ಎನಗೆ ನಿಮ್ಮ ಶರಣರ ಬರವೆ ಜೀವಾಳವಯ್ಯಾ ! –ಬವದೀ. 1043

ಚಂದ್ರನ ವಿಕಾಸವನ್ನನುಸರಿಸಿ ಸಮುದ್ರವು ಉತ್ಕರ್ಷಗೊಳ್ಳುತ್ತದೆ. ಹೀಗಾಗಿ ಚಂದ್ರನ ಬರುವಿಗಾಗಿ ಸಮುದ್ರವು ಹಂಬಲಿಸುತ್ತದೆ. ಬತ್ತಿ ಹೋಗುತ್ತಿರುವ ಕೆರೆಯ ಕಮಲಕ್ಕೆ ಉದಕದ ಹರಿವು ಜೀವಾಳವಾಗುತ್ತದೆ. ಚಕೋರ ಪಕ್ಷಿ ಚಂದ್ರನ ಬರುವಿಗಾಗಿ ಹಂಬಲಿಸುತ್ತದೆ. ಲಿಂಗದೇವಾ, ನನಗೆ ನಿಮ್ಮ ಶರಣರ ಬರುವು ಚೈತನ್ಯವನ್ನು ತುಂಬುತ್ತದೆ.

1042. ಹಗಹದ ಬತ್ತ

ಮನೆಮನೆತಪ್ಪದ ಹಗಹದ ಬತ್ತ ಎನಗಿಲ್ಲೆಂದು ಬೆಂಬೀಳಲೇಕಯ್ಯಾ ?
ಶಿವಶರಣೆಂಬ ಹಗಹದ ಬತ್ತ ಭವಭವದಲ್ಲಿ ಬಳಸಲುಂಟು.
ತವನಿಧಿಯ ಹಡೆದ ನಮ್ಮ ದಾಸಯ್ಯನುಂಟು,
ಲಿಂಗದೇವಾ ! –ಬವದೀ. 1044

ಹಿಂದಿನ ಕಾಲದಲ್ಲಿ ಪ್ರತಿ ಮನೆಗೆ ಹಗೇವು(ಹಗಹ) ಇರುತ್ತಿದ್ದವು. ಅವು ಆಳವಾದ ತಗ್ಗುಗಳು. ಬೆಳೆದ ಧಾನ್ಯಗಳನ್ನು ತುಂಬಿ ಇಡುತ್ತಿದ್ದರು. ಅಲ್ಲಿ ಆಮ್ಲಜನಕ ಇಲ್ಲದಿರುವುದರಿಂದ ಯಾವುದೇ ಹುಳುಗಳು, ಕೀಟಗಳು ಧಾನ್ಯಗಳನ್ನು ನಾಶಮಾಡುತ್ತಿರಲಿಲ್ಲ. "ಪ್ರತಿ ಮನೆಗೂ ಇರುವ ಹಗಹದ ಬತ್ತ ನನಗಿಲ್ಲ ಎಂದು ಕಳವಳಪಡಬೇಕೆ ? ದೇವರಲ್ಲಿ ಶರಣಾಗತಿ ನನಗುಂಟು. ಅವನೇ ನನಗೆ ಕಾಲಕಾಲಕ್ಕೆ ಪಡಿಪದಾರ್ಥಗಳನ್ನು ಒದಗಿಸುವನು. ಹಿಂದೆ ಮುಂದೆ ನೋಡದೆ ಬೆಲೆಬಾಳುವ ವಸ್ತ್ರವನ್ನು ದಾನ ಮಾಡಿ ಸಂಪತ್ತನ್ನು ಪಡೆದ ದಾಸಿಮಯ್ಯನ ಉದಾಹರಣೆ ನನ್ನ ಕಣ್ಣೆದುರಿಗೆ ಉಂಟಲ್ಲವೆ?"

ಗುರು ಬಸವಣ್ಣನವರು ಒಂದು ಕಾಳು ಧಾನ್ಯ, ಸಂಪತ್ತು ಯಾವುದನ್ನೂ ನಾಳೆಗಿರಲಿ ಎಂದು ಕಾಯ್ದಿಟ್ಟವರಲ್ಲ. ಅಂದಂದಿನದು ಅಂದಿಗೆ ಎಂಬ ಸಿದ್ಧಾಂತದವರದು. ಹೀಗಾಗಿ ಹಗಹಗಳನ್ನು ಮಾಡಿ ಸಂಗ್ರಹಿಸಿಡುವ ಪದ್ಧತಿಯನ್ನು ಅವರು ಅನುಸರಿಸಿರಲಿಕ್ಕಿಲ್ಲ.

1043. ಶರಣರಿಗೆ ಸಮವೆ ?

ನೆಲ್ಲ ಗಿಡುವಿನೊಳಗೆ ನಾನೊಂದು ಹುಲ್ಲಾಗಿ ಹುಟ್ಟಿದೆನಯ್ಯಾ
ಆನು ಭಕ್ತನೆಂದೆಂಬೆನೆ, ಆನು ಯುಕ್ತನೆಂದೆಂಬೆನೆ ?
ಆನು ಲಿಂಗದೇವನ ಶರಣರೊಕ್ಕುದನುಂಡಡೆ
ಪಾದರಕ್ಷೆಗೆ ಸರಿಯಹೆನೆ ? –ಬವದೀ. 1045

ತಮ್ಮನ್ನು ತಾವು ತಗ್ಗಿಸಿಕೊಂಡು ಮಾತನಾಡುವುದು ಗುರು ಬಸವಣ್ಣನವರ ಒಂದು ಅಭ್ಯಾಸ. ಉಳಿದ ಶರಣರೆಲ್ಲ ನೆಲ್ಲಿನ (ಬತ್ತದ)ಬೆಳೆಯಂತೆ, ತಾವು ಅದರ ಮಧ್ಯೆ ಬೆಳೆದ ಹುಲ್ಲಿನ ತೆನೆಯಂತೆ ಎಂದು ಕರೆದುಕೊಳ್ಳುತ್ತಾರೆ. ನಾನು ಭಕ್ತನಲ್ಲ, ನಾನು ಯುಕ್ತನಲ್ಲ; ಲಿಂಗದೇವನ ಶರಣರ ಒಡನಾಡುತ್ತ ಅವರೊಡನೆ ಸಮ ಪಂಕ್ತಿಯಲ್ಲಿ ಪ್ರಸಾದವನ್ನು ಸ್ವೀಕಾರ ಮಾಡಿದ ಮಾತ್ರಕ್ಕೆ ಶರಣರ ಪಾದರಕ್ಷೆಯ ಸಮಕ್ಕೂ ಬರುವುದಿಲ್ಲ ಎಂದು ತಮ್ಮನ್ನು ತಾವು ಕೆಳಗಿಳಿಸಿಕೊಂಡು ನುಡಿಯಾಡುತ್ತಾರೆ.

1044. ಹೊರಗಣವನು

ಮಜ್ಜನಕ್ಕೆರವ ಮಹಿಮರೆಲ್ಲರೂ ಸಲಿಗೆವಂತರಾಗಿ ಒಳಗೈದಾರೆ.
ನಾನು ಜೀಯಾ ಹೊರಗಣವನು ;
ಸಂಬೋಳಿ ಎನ್ನುತ್ತ ಇಂಬಿನೊಳಿದ್ದೇನೆ.
ಲಿಂಗದೇವಯ್ಯಾ, ನಿಮ್ಮ ನಾಮವಿಡಿದ ಅನಾಮಿಕ ನಾನಯ್ಯಾ —ಬವದೀ. 1046

ಉದಾತ್ತ ಉದ್ದೇಶದೊಡನೆ, ಅತ್ಯಂತ ಕಿಂಕರಭಾವದಿಂದ ಧರ್ಮಪಿತರು ಆಡುವ ನುಡಿಗಳು ಕೆಲವೊಮ್ಮೆ ಅಪಾರ್ಥಕ್ಕೆ ಕಾರಣವಾಗುತ್ತವೆ. ಅಂಥ ವಚನಗಳಲ್ಲಿ ಇದೂ ಒಂದು. ಈ ವಚನ ಹಿಡಿದುಕೊಂಡು ಕೆಲವು ಲೇಖಕರು ಗುರು ಬಸವಣ್ಣನವರು ದಲಿತರಲ್ಲಿ ಹುಟ್ಟಿದವರೆಂದು ಬರೆದಿದ್ದಾರೆ. ಗುರು ಬಸವಣ್ಣನವರು ಹುಟ್ಟಿದ ಕುಲದ ಬಗ್ಗೆ ಯಾವುದೇ ಸಂದೇಹವೂ ಇಲ್ಲ. ಈ ವಚನದ ಹಿನ್ನೆಲೆ ನೋಡೋಣ. ಗುರು ಬಸವಣ್ಣನವರು ನೀಡಿದ ಧರ್ಮವು ಸದಾಚಾರ ಸಂಪನ್ನ ಧರ್ಮವಾಗಿ ಅಹಿಂಸಾ ಪ್ರಧಾನವೂ ಆಗಿ ಸಸ್ಯಾಹಾರಿ ಜೀವನ ವಿಧಾನಕ್ಕೆ ಒತ್ತು ಕೊಟ್ಟಿತು. ಇದರಿಂದ ಮೇಲು ಜಾತಿ ಜನರು ಸುಲಭವಾಗಿ ಈ ಧರ್ಮವನ್ನು ಸ್ವೀಕರಿಸಿದರು. ಇವರೇ ದೀಕ್ಷಾ(ಸಲಿಗೆ) ವಂತರಾಗಿ ಒಳಗೆ ಬಂದಿದ್ದಾರೆ. ಆದರೆ ಗುರು ಬಸವಣ್ಣನವರ ಹೃದಯ ಹಂಬಲಿಸುತ್ತಿದ್ದುದು ಧರ್ಮಸಂಸ್ಕಾರ ವಿರಹಿತರಾದ ಕೆಳವರ್ಗಗಳವರ ಬರುವಿಗಾಗಿ. ಅದಕ್ಕಾಗಿ ಅವರು ಹೊರಗೆ ನಿಂತು ಕಾಯುತ್ತಿದ್ದಾರೆ. 'ಸಂಬೋಳಿ'– ಈ ಪದ ದಲಿತರು ನಡೆದಾಡುತ್ತಿದ್ದಾಗ ಬಳಸುತ್ತಿದ್ದ ಪದ. ಇದನ್ನು ಉಚ್ಚರಿಸುತ್ತ ದಲಿತರು ಬಂದರೆ ಅವರ ನೆರಳೂ ಬೀಳಬಾರದೆಂದು ಉಚ್ಚವರ್ಣೀಯರು ದೂರಸರಿಯುತ್ತಿದ್ದರು. ದಲಿತರ ವಿಶ್ವಾಸ ಗಳಿಸಲು ಗುರು ಬಸವಣ್ಣನವರು 'ಸಂಬೋಳಿ' ಎಂದು ನುಡಿಯುತ್ತಾರೆ.

"ನಿಮ್ಮ ನಾಮವಿಡಿದ ಅನಾಮಿಕ ನಾನಯ್ಯ" ಎಂಬ ವಾಕ್ಯ ಮಹತ್ವಪೂರ್ಣ ವಾದುದು. ದೇವರನ್ನು ದೃಢವಾಗಿ ನಂಬಿದ ಗುರು ಬಸವಣ್ಣನವರು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಕೀರ್ತಿವಾರ್ತೆಬಯಸದೆ ಅನಾಮಿಕರಾಗಿ ಉಳಿಯಲು ಬಯಸುತ್ತಾರೆ. ಜನ ಸಮುದಾಯದೊಡನೆ ಒಂದಾಗಲು ಇಷ್ಟಪಡುತ್ತಾರೆ.

1045. ತಪ್ಪಿಗಾಗಿ ಶಿಕ್ಷಿಸಬೇಡ

ತೊತ್ತಿನ ತೊತ್ತಿನ ಮರುದೊತ್ತಿನೊಡನೆ
ಮುನಿವುದು ನಿಮಗೆ ಗುಣವೆ ?
ಅಯ್ಯಾ, ಅಯ್ಯಾ, ನಿಮ್ಮ ಧರ್ಮದವ ನಾನಯ್ಯಾ,
ಒಮ್ಮಿಂಗೆ ಕೃಪೆಮಾಡಿ ಕರುಣಿಸಯ್ಯಾ, ಲಿಂಗದೇವಾ,
ಇಲಿಗಂಜಿ ಮನೆಯ ಸುಡುವರುಂಟೆ ? —ಬವದೀ. 1047

ಗಾದೆಗಳಂತೆ ತೋರಿಬರುವ ಕೆಲವು ಪ್ರಯೋಗಗಳು ಗುರು ಬಸವಣ್ಣನವರ ವಚನಗಳಲ್ಲಿ ಕಾಣಸಿಗುತ್ತವೆ. ನೆಲ್ಲ ಗಿಡುವಿನೊಳಗೆ ಹುಲ್ಲಾಗಿ ಹುಟ್ಟಿದೆ, ಇಲಿಗಂಜಿ ಮನೆಯ ಸುಡುವರುಂಟೆ– ಅಂಥ ಸುಂದರ ಪ್ರಯೋಗಗಳು. ಮುನಿಸಿಕೊಳ್ಳಬೇಕಾದರೆ ಎದುರಾಳಿ ಸಮಮಟ್ಟದವನಾಗಿರಬೇಕು. ತೀರಾ ಕೆಳಮಟ್ಟದ ಜನರೊಡನೆ ಮುನಿಸಿಕೊಳ್ಳಬಾರದು. "ದೇವರೆ, ಸೇವಕರ ಸೇವಕನ ಮರು ಸೇವಕನ ಮಟ್ಟದ ವ್ಯಕ್ತಿಯ ಜೊತೆಗೆ ಒಡೆಯ ಮುನಿಸಿಕೊಳ್ಳಲು ಹೋಗುವುದಿಲ್ಲ. ಹಾಗೆ ನೀನು ನನ್ನಂಥ ಸಾಮಾನ್ಯನ ಜೊತೆಗೆ ಮುನಿಸಿಕೊಳ್ಳುವುದು ತರವೆ ? ಅಯ್ಯಾ, ನಾನು ನಿನಗೆ ಮೊರೆಹೊಕ್ಕವನು. ನನ್ನಲ್ಲಿ ಹಲವು ಲೋಪದೋಷಗಳಿರಬಹುದು. ಅದಕ್ಕಾಗಿ ನನ್ನ ಮೇಲೆ ಮುನಿಯದೆ ಒಮ್ಮಿಂಗೆ ಕರುಣಿಸು. ಇಲಿಗಂಜಿ ಯಾರೂ ಮನೆಯನ್ನು ಸುಡರು. ಹಾಗೆ ನನ್ನ ಲೋಪದೋಷಗಳಿಗಾಗಿ ನನ್ನ ಮೇಲೆ ಮುನಿಯಬೇಡ." ಎಂದು ಲಿಂಗದೇವನಲ್ಲಿ ಪ್ರಾರ್ಥಿಸುತ್ತಾರೆ.

1046. ನಿಜಪದದಲ್ಲಿ ಬೆರೆಸುವ ಹಂಬಲ

ಆನು, ನಿಮ್ಮ ಬಂಟರ ಬಂಟ ನಾನಯ್ಯ,
ಆನು, ನಿಮ್ಮ ಲೆಂಕರ ಲೆಂಕ ನಾನಯ್ಯಾ
ಆನು, ನಿಮ್ಮ ತೊತ್ತಿನ ಪಡುಗವ ತೆಗೆವ ಪಡಿದೊತ್ತಯ್ಯ,
ಲಿಂಗದೇವನ ಶರಣರಿಗೆಲ್ಲಾ ಸಂಗನಬಸವನ ಬಿನ್ನಪ ಕವಳಿಗೆಗೆ ಸಂದಿತ್ತು
ನಿಮ್ಮ ನಿಜಪದದಲ್ಲಿ ಬೆರಸೆಂದು ಕೃಪೆಮಾಡಿರಯ್ಯಾ —ಬವದೀ. 1048

ನಾನು, ನಿಮ್ಮ ಮನೆ ಕಾಯುವ ಬಂಟರ ಬಂಟ. ಸೇವಕರ ಸೇವಕ, ಮನೆಯಲ್ಲಿ ಕೆಲಸ ಮಾಡುವ ತೊತ್ತುಗಳ ಪಾತ್ರೆ-ಪಡುಗ ತೆಗೆಯುವ ಪಡಿದೊತ್ತು. ಶರಣರ ಜೋಳಿಗೆಗೆ ನನ್ನ ಬಿನ್ನಹವನ್ನು ಹಾಕುತ್ತಿದ್ದೇನೆ. ನೀವೆಲ್ಲ ಆಶೀರ್ವದಿಸಿರಿ–"ನಾನು ಲಿಂಗದೇವನ ನಿಜ ಪದದಲ್ಲಿ ಬೆರೆಸಬೇಕು." ಎಂದು

1047. ಲಿಂಗಧಾರಿಗಳ ಸೇವಕ

ಆವನಾದಡೇನು,
ಶ್ರೀ ಲಿಂಗದೇವರು ಅಂಗದ ಮೇಲೆ ಉಳ್ಳವರ
ಬಾಯ ತಂಬುಲವ ಮೆಲುವೆನು;
ಬೀಳುಡುಗೆಯ ಹೊದೆವೆನು
ಪಾದರಕ್ಷೆಯ ಕಾಯ್ದು ಬದುಕುವೆನು
ನಮ್ಮ ಲಿಂಗದೇವರ ಅಂಗದಿಂದ ತೊಲಗದೆ ನೆನೆವವರ. —ಬವದೀ. 1049

ಯಾವ(ಜಾತಿಮತಪಂಥದವ)ನಾದಡೇನು, ಇಷ್ಟಲಿಂಗ ದೇವರು ಶರೀರದ ಮೇಲೆ ಇದ್ದರೆ ಅಂಥವರ ಬಾಯ ತಾಂಬೂಲವ ಮೆಲುವೆ. (ಅಂಥವರು ಕೊಡುವ ತಾಂಬೂಲವ ಮೆಲ್ಲುವೆ) ಅವರು ಉಟ್ಟುಬಿಟ್ಟ ಬಟ್ಟೆಗಳನ್ನು ನಾನು ಭಕ್ತಿಯಿಂದ ಹೊದೆದುಕೊಳ್ಳುವೆ. ಅವರ ಪಾದರಕ್ಷೆಗಳನ್ನು ಕಾಯುವೆ. ಲಿಂಗದೇವರನ್ನು ಶರೀರದಿಂದ ಅಗಲಿಸದೆ, ಸದಾ ನೆನೆಯುವವರ ಸೇವೆಯನ್ನು ಮಾಡುವೆ.

ಧರ್ಮಪಿತರ, "ಶರಣರ ಪಾದರಕ್ಷೆಗಳನ್ನು ಕಾಯ್ದು ಬದುಕುವೆ." ಎಂಬ ಮಾತು ಸಿಖ್ಖರ ಗುರುದ್ವಾರದಲ್ಲಿ ಸಾಕಾರಗೊಂಡಿದೆ. ಭಕ್ತರು ಚಪ್ಪಲಿ ಬೂಟುಗಳನ್ನು ಹೊರಗೆ ಬಿಟ್ಟು ಹೋಗಿರುತ್ತಾರಷ್ಟೆ. ಆಗ ದೊಡ್ಡ ದೊಡ್ಡ ಶ್ರೀಮಂತರು ಕಾರಿನಲ್ಲಿ ಬಂದು, ಆ ಪಾದರಕ್ಷೆಗಳನ್ನು ಸ್ವಚ್ಛ ಮಾಡಿ, ಪಾಲೀಷ್ ಮಾಡಿಟ್ಟು ಹೋಗುತ್ತಾರೆ.

1048. ಉಪದೇಶವ ಮಾಡಲೊಲ್ಲರು.

ಓಹೋ ನಾನೊಬ್ಬರಿಗೆಯೂ ಉಪದೇಶವ ಮಾಡಲಮ್ಮೆನು
ಮುನ್ನಲಾದವರು ತಮ್ಮಿಂದ ತಾವಾದರು.
ಅವರೆಲ್ಲರೂ ನಿಜಲಿಂಗೈಕ್ಯರು, ನಾನೇನುವ ಮಾಡಿತಿಲ್ಲ
ತತ್ತ್ವವ ಹಿಡಿದವರಿಗೆ ತೊತ್ತಾಗಿ ನಡೆವೆನು.
ಅಮರಗಣಂಗಳು ಸಾಕ್ಷಿಯಾಗಿ
ಲಿಂಗದೇವರ ಮುಂದೆ ಭಾಷೆಪ್ರಸಾದವನಿಕ್ಕಲಮ್ಮೆನಯ್ಯಾ, ಚನ್ನಬಸವಣ್ಣಾ. —ಬವದೀ. 1050

ಧರ್ಮಪಿತರು ಅತೀವ ವಿನಯಶಾಲಿಗಳು. ಅವರ ಬದುಕು, ಬರಹಗಳು ಒಂದು ಮಹಾನ್ ಉಪದೇಶ. ಆದರೂ ಅವರು ನಾನು ಇತರರಿಗೆ ಉಪದೇಶ ಮಾಡಲಿಚ್ಛಿಸುವುದಿಲ್ಲ ಎನ್ನುತ್ತಾರೆ. ಒಂದರ್ಥದಲ್ಲಿ ಇದೂ ನಿಜ. ಅವರು ತಮ್ಮನ್ನು ತಾವು ಅವಲೋಕನ ಮಾಡಿಕೊಳ್ಳುವ ಮೂಲಕ, ತಿದ್ದಿಕೊಳ್ಳುವ ಮೂಲಕ ಜಗತ್ತನ್ನು ತಿದ್ದುತ್ತಾರೆ.

ಗುರು ಬಸವಣ್ಣ, ಶಿಷ್ಯ ಚನ್ನಬಸವಣ್ಣ ಇಬ್ಬರ ನಡುವೆ ನಡೆದ ಸುಂದರ ಸಂಭಾಷಣೆ ಇದು. ಒಮ್ಮೆ ಚನ್ನಬಸವಣ್ಣನವರು "ಏನಾದರೂ ಉಪದೇಶ ಮಾಡಿರಿ" ಎನ್ನುತ್ತಾರೆ. "ನಾನು ಯಾರಿಗೂ ಉಪದೇಶ ಮಾಡಬಯಸುವುದಿಲ್ಲ." ಎಂದು ಉತ್ತರಿಸುತ್ತಾರೆ. "ಎಷ್ಟು ಜನ ಶರಣರು ಆಗಿಹೋಗಿದ್ದಾರೆ. ಅವರಿಗೆಲ್ಲ ಮಾಡಿದ್ದೀರಲ್ಲವೆ?" ಎಂದು ಮರು ಪ್ರಶ್ನಿಸುತ್ತಾರೆ. "ಇಲ್ಲ... ಇಲ್ಲ..... ಅವರೆಲ್ಲ ತಮ್ಮಿಂದ ತಾವು ರೂಪುಗೊಂಡವರು. ಅವರೆಲ್ಲರೂ ನಿಜ ಜ್ಞಾನಿಗಳು. ನಾನು ಏನನ್ನೂ ಮಾಡಿಲ್ಲ. ಬಹಳವೆಂದರೆ ತತ್ತ್ವವ ಹಿಡಿದವರಿಗೆ ತೊತ್ತಾಗಿ ನಡೆದಿದ್ದೇನೆ. ಅಮರಗಣಂಗಳು ಸಾಕ್ಷಿಯಾಗಿ ನಾನು ಭಾಷೆ (ಉಪದೇಶ) ಪ್ರಸಾದವ ಕೊಡಲು ಬಯಸುವುದಿಲ್ಲ ಚನ್ನಬಸವಣ್ಣಾ" ಎಂದು ಧರ್ಮಪಿತರು ಉತ್ತರಿಸುತ್ತಾರೆ.

1049. ನಡೆ ನುಡಿಗಳ ಸಾಮರಸ್ಯ

ನಡೆಯ ಚನ್ನ ನುಡಿಯ ತೋರಿ
ನುಡಿಯ ಚನ್ನ ನಡೆದು ತೋರಿ
ಆ ನಡೆನುಡಿ ಎರಡರ ಚನ್ನ ಮೃಡ ನಿಮ್ಮೊಳಡಗಿ

ತಾವೆಡೆಯಿಲ್ಲದೆ ಪರಿಪೂರ್ಣರಾದವರ ಪಡುಗವ ಹೊರುವೆ
ಪಾದರಕ್ಷೆಯ ಹಿಡಿವೆ, ಎನಗದೆ ಮಾಟ ಬಯಸುವ ಬೇಟ.
ಲಿಂಗದೇವಾ, ಇದು ನಿಮ್ಮ ಕೂಡುವ ಕೂಟ. –ಬವದೀ. 1051

ಗುರು ಬಸವಣ್ಣನವರ ತತ್ತ್ವ-ಸಿದ್ಧಾಂತಗಳ ಸಾರವೇ ನಡೆ-ನುಡಿಗಳ ಸಾಮರಸ್ಯ. "ನಡೆಯ ಚೆಲುವಿಕೆಯನ್ನು ಮಾತಿನಲ್ಲಿ ತುಂಬಿ, ನುಡಿಯ ಚೆಲುವಿಕೆಯನ್ನು ನಡೆಯಲ್ಲಿ ತುಂಬಿ, ನಡೆ ನುಡಿಗಳೆರಡನ್ನೂ ದೇವನಿಗೆ ಸಮರ್ಪಿಸಿ ಪರಿಪೂರ್ಣತ್ವವನ್ನು ಪಡೆದ ಶರಣರ ಸಾಮಗ್ರಿಗಳನ್ನು ಹೊತ್ತು ನಡೆಯುವೆ ; ಅವರ ಪಾದರಕ್ಷೆಯ ಹಿಡಿದುಕೊಳ್ಳುವೆ. ಇಂಥ ಸೇವೆಯನ್ನು ನಾನು ಬಯಸುವೆ, ಪ್ರೀತಿಸುವೆ. ಲಿಂಗದೇವಾ, ಇದೇ ನಿಮ್ಮನ್ನು ಕೂಡುವ ಕೂಟ." ಎನ್ನುತ್ತಾರೆ ಗುರು ಬಸವಣ್ಣನವರು.

1050. ಅರಿವು-ಮರಹು ದೇವನದು

ಎನ್ನ ತನುವಿಂಗೆ ನೀನೊಡೆಯ, ಎನ್ನ ಮನಕ್ಕೆಯೂ ನೀನೊಡೆಯ,
ಎನ್ನ ಧನಕ್ಕೆಯೂ ನೀನೊಡೆಯನಾದ ಬಳಿಕ
ಎನ್ನರಿವು ನಿನ್ನದು, ಎನ್ನ ಮರಹು ನಿನ್ನದು, ಲಿಂಗದೇವಾ. –ಬವದೀ. 1052

ಒಂದು ಮಾನಸಿಕ ಸ್ಥಿತಿ ಸಾಧಕರಿಗೆ ಅಳವಡುತ್ತದೆ. ಆಗ 'ನನ್ನದು' ಎನ್ನುವುದು ಏನೂ ಇರದು. ತನುವಿಗೆ , ಮನಸ್ಸಿಗೆ, ಧನಕ್ಕೆ ದೇವನೆ ಒಡೆಯನಾಗುತ್ತಾನೆ. ಆಗ ಮಾಡುವ ಮಾಟ ಪುಣ್ಯ-ಪಾಪಕ್ಕೆ ಅತೀತ. ಹೀಗಾಗಿ ಅರಿವು-ಮರೆವು ಎಂಬುದೇ ಇರದು. ಎಲ್ಲವೂ ದೈವಿ ಮಾಟಗಳೇ ಆಗಿರುತ್ತವೆ.

1051. ಗುರು ಬಸವಣ್ಣನವರು ಅವತಾರ ಪುರುಷರು

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ.
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು.
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು. –ಬವದೀ. 1053

ಇದು ಅತ್ಯಂತ ಮಹತ್ವಪೂರ್ಣ ವಚನ. ಇದರಲ್ಲಿ ಸ್ವತಃ ಬಸವಣ್ಣನವರೇ ತಾವು ಅವತಾರ ಪುರುಷರೆಂದು, ಸೃಷ್ಟಿಕರ್ತನೇ ಅವರನ್ನು ವಿಶಿಷ್ಟ ಗುರಿಯೊಡನೆ ಈ ಜಗತ್ತಿಗೆ ಕಳಿಸಿದ್ದಾನೆಂದು ಹೇಳಿಕೊಂಡಿದ್ದಾರೆ. ಸಾಧಕಾವಸ್ಥೆಯಲ್ಲಿ ಪರಿಪರಿಯಾಗಿ ಹಂಬಲಿಸಿದರೂ ಒಂದು ವಿಶಿಷ್ಟ ಹಂತವನ್ನು ತಲ್ಪಿದಾಗ ತಮ್ಮ ಬರುವಿಕೆ, ಇರುವಿಕೆ ದೇವಸಂಕಲ್ಪಿತ ಎಂದು ಅರಿಯುತ್ತಾರೆ. "ಸೃಷ್ಟಿಕರ್ತ ಲಿಂಗದೇವನು ಕಳುಹಿಸಿ ಕೊಟ್ಟಿದ್ದರಿಂದ ನಾನು ಜನ್ಮವೆತ್ತಿ ಬಂದು ಮರ್ತ್ಯದಲ್ಲಿ ಮಹಾಮನೆಯನ್ನು ಕಟ್ಟಿದೆ. ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸೇವೆ ಮಾಡಿ ಬದುಕಿದೆ. ಇದೀಗ ನನ್ನನ್ನು ಕಳುಹಿಸಿದ ಕರ್ತನ ಆಜ್ಞೆ ಪುನಃ ಬಂದಿದೆ. ಆ ಕರೆಯ ಪ್ರಕಾರ ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದ ಎಂದು ತಲೆಬಾಗುವೆನು."

ಕಡೆಯ ಎರಡು ವಾಕ್ಯಗಳು ಗುರು ಬಸವಣ್ಣನವರ ಐಕ್ಯದ ಪ್ರಕ್ರಿಯೆಗೆ ಸಂಬಂಧಿಸಿವೆ. ಲಿಂಗದೇವರ ನಿರೂಪವನ್ನು ಈಗ ಪಡೆದಿದ್ದಾರೆ. "ಬಸವಣ್ಣಾ, ನೀನು ಮರ್ತ್ಯಕ್ಕೆ ಬಂದ ಮಣಿಹ ಪೂರೈಸಿತು. ಇನ್ನು ನೀನು ನನ್ನಲ್ಲಿ ಒಂದಾಗು." ಎಂಬ ವಾಣಿಯನ್ನು ಕೇಳಿ ಐಕ್ಯರಾಗಲು ಸಿದ್ಧರಾಗುತ್ತಾರೆ. ಇದರಿಂದ ನಮಗೆ ಮಹತ್ವಪೂರ್ಣವಾದ ವಿಷಯವನ್ನು ಊಹಿಸಲು ಸಾಧ್ಯವಾಗುತ್ತದೆ. ಕೆಲವು ಜನರು ಹೇಳುವಂತೆ ಗುರು ಬಸವಣ್ಣನವರು ವಿರೋಧಿಗಳಿಂದ ವಧೆಯಾಗಿಲ್ಲ; ಆತ್ಮಹತ್ಯೆಯನ್ನೂ ಮಾಡಿಕೊಂಡಿಲ್ಲ. ಯೋಗಿಗಳಾದ ಅವರು ಇಚ್ಛಾಮರಣಿಗಳಾಗಿ ಯೋಗಶಕ್ತಿಯಿಂದ ದೇಹವನ್ನು ತೊರೆದು ಆತ್ಮವನ್ನು ಲಿಂಗದೇವನಲ್ಲಿ ವಿಲೀನ ಮಾಡಿದ್ದಾರೆ.

1052. ಉಪಚಾರವನರಿಯದ ಸ್ಥಿತಿ

ಆನು ನಿಮ್ಮಲ್ಲಿ ಪ್ರಪಂಚಿನುಪಚಾರವನರಿಯೆನಯ್ಯಾ
ನಿಮ್ಮ ಪಾದದಲ್ಲಿ ತದ್ಗತನಾಗಿಪ್ಪೆ
ಭಕ್ತಿ ಯುಕ್ತಿ ವಿರಕ್ತಿಯ ಉಪಚಾರವನರಿಯೆನು, ಲಿಂಗದೇವಾ
ಭಿನ್ನವಿಲ್ಲದ ಭೃತ್ಯಾಚಾರಕ್ಕೆ ಬಂದ ಪದಾರ್ಥವ ನೀನೆಂದೆ ಚಿತ್ತೈಸಯ್ಯಾ. –ಬವದೀ. 1054

ಸಾಂಪ್ರದಾಯಿಕ, ಯಾಂತ್ರಿಕ ಅರ್ಚನೆಗೂ ಸಾಧಕ ಹೃದಯಿಗಳು ಮಾಡುವ ಕ್ರಿಯೆಗಳಿಗೂ ಬಹಳ ವ್ಯತ್ಯಾಸವಿರುತ್ತದೆ. ಸಾಧಕ ಹೃದಯಿಗಳು ದೇವನೊಡನೆ ಮನದಲ್ಲಿ ಮಾತನಾಡುತ್ತಿರುತ್ತಾರೆ, ಪ್ರೀತಿಸುತ್ತಾರೆ, ಮುನಿಯುತ್ತಾರೆ. "ದೇವಾ, ನಾನು ಸಾಂಪ್ರದಾಯಿಕ ಉಪಚಾರವನ್ನು ಅರಿಯೆನು. ನನ್ನ ಮನಸ್ಸು ನಿನ್ನ ಪಾದದಲ್ಲಿ ತದ್ಗತವಾಗಿದೆ. ಭಕ್ತಿ, ಯುಕ್ತಿ, ವಿರಕ್ತಿಯ ಉಪಚಾರವನ್ನು ನಾನು ಅರಿಯೆನು. ಆದ್ದರಿಂದ ಭೃತ್ಯಾಚಾರ ಭಾವದಿಂದ ನಾನು ಏನನ್ನು ಕೊಡುವೆನೋ ಅದನ್ನು ಪ್ರೀತಿಯಿಂದ ಸ್ವೀಕರಿಸು."

1053. ತನುಮನ ಸಮರ್ಪಿತ

ಮನ ಮುಟ್ಟಿದ ಭಕ್ತಿಗೆ ತನುವೆ ಅರ್ಪಿತವಯ್ಯಾ
ತನು ಮುಟ್ಟಿದ ಭಕ್ತಿಗೆ ಮನವೆ ಅರ್ಪಿತವಯ್ಯಾ
ಎನ್ನ ತನುಮನವೆರಡೂ ನಿಮ್ಮ ಚರಣಕ್ಕೆ ವೇದ್ಯ ನೋಡಯ್ಯಾ
ತ್ರಾಹಿ, ತ್ರಾಹಿ ಶರಣಾರ್ಥಿ, ನೀವೇ ಬಲ್ಲಿರಿ ಲಿಂಗದೇವಾ. –ಬವದೀ. 1055

ತನುಮನ ಇವೆರಡು ಅವಿಭಾಜ್ಯ ಅಂಗಗಳು. ಯಾವುದೇ ಕ್ರಿಯೆಯಲ್ಲಿ ಇವೆರಡರ ಜಂಟಿ ಪಾತ್ರ ಗಣನೀಯ. ಮನಸ್ಸು ಭಕ್ತಿಪೂರ್ಣವಾಗಿದೆ ಎಂದರೆ ಆ ಭಕ್ತಿ ತನುವಿನ ಮೂಲಕ ವ್ಯಕ್ತವಾಗಬೇಕು. ತನು ಭಕ್ತಿಪೂರ್ಣ ವರ್ತನೆ ಮಾಡಿದರಷ್ಟೇ ಸಾಲದು. ಆ ಭಕ್ತಿ ಮನಸ್ಸನ್ನು ತುಂಬಬೇಕು. ಇಂಥ ತನುಮನಗಳೆರಡನ್ನೂ ಲಿಂಗದೇವನ ಚರಣಕ್ಕೆ ನಿವೇದಿಸಿ ಅವನಿಗೆ ಶರಣಾಗಿದ್ದಾರೆ ಗುರುಬಸವಣ್ಣನವರು.

1054. ಪ್ರಭುದೇವರ ಆರೋಗಣೆ

ಅಯ್ಯಾ, ನೀವೆನ್ನ ಬಲ್ಲಿರಲ್ಲದೆ ನಾ ನಿಮ್ಮ ಬಲ್ಲೆನೆ ?
ನಿಮ್ಮ ನಿಲವ ನೋಡಿಹೆನೆಂದಡೆ
ನಿಮ್ಮ ಘನವೆನ್ನ ಮನಕ್ಕೆ ಸಾಧ್ಯವಾಗದ ಕಾರಣ,
ಅಂತಿಂತೆಂದುಪಮಿಸಲಮ್ಮದೆ ಇದ್ದೆ ನೋಡಯ್ಯಾ
ನಿತ್ಯತೃಪ್ತಮಹಿಮಾ ನಿಮಗೆಂದಳವಡಿಸಿದ ಪದಾರ್ಥವ
ಸುಚಿತ್ತದಿಂದವಧರಿಸಿ ಸಲಹಯ್ಯಾ ಪ್ರಭುವೆ, ಲಿಂಗದೇವಾ. –ಬವದೀ. 1056

"ಅಯ್ಯಾ, ನೀವು ನನ್ನನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ನಾನು ನಿಮ್ಮನ್ನು ಅರ್ಥ ಮಾಡಿಕೊಳ್ಳಲಾರೆ. ನಿಮ್ಮ ವ್ಯಕ್ತಿತ್ವ ಅಗಾಧ. ಅದನ್ನು ಅರಿಯಲು ನನಗೆ ಸಾಧ್ಯವಾಗದು. ಹೀಗಾಗಿ ನಿಮ್ಮನ್ನು ಯಾವುದೇ ಹೋಲಿಕೆ ಕೊಟ್ಟು ವರ್ಣಿಸಲಾರೆ. ನೀವು ನಿತ್ಯತೃಪ್ತರು. ನಿಮಗೆಂದು ಸಿದ್ಧಪಡಿಸಿರುವ ಪ್ರಸಾದವನ್ನು ಸ್ವೀಕರಿಸಿ ಪ್ರಭುವೆ." ಎಂದು ಅಲ್ಲಮಪ್ರಭುದೇವರಲ್ಲಿ ಬಿನ್ನವಿಸುತ್ತಾರೆ.

ಇಲ್ಲಿ ಸಾಲಾಗಿ ಬರುವ ನಾಲ್ಕೈದು ವಚನಗಳು ಶೂನ್ಯ ಸಂಪಾದನೆಯಲ್ಲಿ ಪ್ರಭುದೇವರ ಆರೋಗಣೆ ಎಂಬ ಅಧ್ಯಾಯದಲ್ಲಿ ಬರುತ್ತವೆ. ಅಲ್ಲಮ ಪ್ರಭುದೇವರು ಹೊಟ್ಟೆಬಾಕರಂತೆ ತಿನ್ನುವರು. "ನಾನು ಮಾಡುತ್ತೇನೆ, ನಾನು ನೀಡುತ್ತೇನೆ." ಎಂಬ ಹಮ್ಮಿನಿಂದ ಗುರು ಬಸವಣ್ಣನವರು ಅರ್ಪಣೆ ಮಾಡುತ್ತಾರೆ. ಇದರಿಂದ ಪ್ರಭುದೇವರನ್ನು ತೃಪ್ತಿಪಡಿಸಲು ಆಗುವುದಿಲ್ಲ. ಕಡೆಗೆ ಶರಣಾಗಿ "ನನ್ನನ್ನು ನಾನು ಕೊಟ್ಟುಕೊಳ್ಳುತ್ತೇನೆ." ಎಂದಾಗ ಪ್ರಭುದೇವರಿಗೆ ಸಮಾಧಾನವಾಗುತ್ತದೆ ಎಂದು ಶೂನ್ಯ ಸಂಪಾದನೆಯಲ್ಲಿ ಚಿತ್ರಿಸಲಾಗಿದೆ. ಪ್ರಭುದೇವರಂಥ ಯೋಗಿಗಳನ್ನು ಬಕಾಸುರನಂತೆ ಚಿತ್ರಿಸುವುದು ಅವರ ಹಿರಿಮೆಯನ್ನೇನೂ ಹೆಚ್ಚಿಸುವುದಿಲ್ಲ ಎಂದು ನನ್ನ ಭಾವನೆ. ಶರೀರಧಾರಿಯಾದ ಅವರು ಹಾಗೆ ತಿನ್ನಲು ಸಾಧ್ಯವೆ? ನನಗೆ ಹೀಗೆ ಅನ್ನಿಸುತ್ತದೆ. ಕಲ್ಯಾಣದಲ್ಲಿ ಗುರು ಬಸವಣ್ಣನವರು ಬೃಹತ್ ಗಣಪರ್ವವನ್ನು ಏರ್ಪಡಿಸುತ್ತಾರೆ. ಅಲ್ಲಮ ಪ್ರಭುದೇವರ ಜಂಗಮತ್ವದಲ್ಲಿ ಈ ಪರ್ವವು ಜರುಗುತ್ತದೆ. ಇದಕ್ಕೆ ವಿವಿಧ ಪ್ರಾಂತ್ಯಗಳಿಂದ ಜನರು ಆಗಮಿಸುತ್ತಾರೆ. ಊಹಿಸಲಾರದಷ್ಟು ಬೃಹತ್ತಾದ ಅನ್ನ ದಾಸೋಹವು ನಡೆಯುತ್ತದೆ. ಎಷ್ಟೋ ದಿವಸಗಳಿಂದ ಕೂಡಿಟ್ಟ ಸಂಚಿತ ಪದಾರ್ಥವನ್ನೆಲ್ಲ ಹೊರತೆಗೆಯಬೇಕಾಗುತ್ತದೆ. ಇದನ್ನು ಪ್ರಭುದೇವರು ಒಬ್ಬರೇ ತಿಂದರು ಎಂಬಂತೆ ಬಿಂಬಿಸುವುದು ಆಭಾಸಕರ.

(11ನೆಯ ಕಲ್ಯಾಣ ಪರ್ವಕ್ಕೆ ಜನರು ಸೇರಿದುದು, ದಿ.28-10-2012ರಂದು ನಡೆದ ಬೃಹತ್ ದಾಸೋಹ ನೆನಪಿಸಿಕೊಂಡರೆ ಮೈಜುಮ್ಮೆನ್ನಿಸುತ್ತದೆ. ಅಂಥ ಒಂದು ದಾಸೋಹ ಬಸವಣ್ಣನ ಕಲ್ಯಾಣದಲ್ಲಿ ಪ್ರಭುದೇವರ ಪೀಠಾರೋಹಣದ ದಿವಸ ನಡೆದಿರಲೂ ಬಹುದು.)

1055. ಸಂಚಿತ ಸಯದಾನವೂ ಖಾಲಿ

ಅಳವಡಿಸಿದ ಪದಾರ್ಥ ಅರ್ಪಿತಕ್ಕೆ ಸರಿಯಾಯಿತ್ತು.
ಅಳವಡಿಸದ ಮುನ್ನವೆ ಕೈಕೊಳ್ಳುತ್ತೈದಾನೆ ಶಿವನು
ಸಂದ ಪದಾರ್ಥ ಸಲ್ಲಲಿ;
ಲಿಂಗದೇವರ ಆರೋಗಣೆಯ ಅವಸರಕ್ಕೆ
ಸಂಚಿತ ಸಯದಾನವ ತೆಗೆಸಿರೆ ಸೊಡ್ಡಳ ಬಾಚರಸರೆ ! –ಬವದೀ. 1057

ಗಣಪರ್ವಕ್ಕೆಂದು ಸಿದ್ಧಪಡಿಸಿದ ಪದಾರ್ಥವೆಲ್ಲ ಅರ್ಪಿತಕ್ಕೆ ಸರಿಯಾಗಿತ್ತು. ಆದರೆ ಇನ್ನೂ ಪಡಿಪದಾರ್ಥಗಳ ಅಗತ್ಯವಿದೆ. ಖರ್ಚಾಗುವಷ್ಟು ಆಗಲಿ. ಲಿಂಗದೇವನು ಶರಣರ ಮೂಲಕ ಆರೋಗಣೆ ಮಾಡುತ್ತಿದ್ದಾನೆ. ಆದ್ದರಿಂದ ಉಗ್ರಾಣದಲ್ಲಿ ಸಂಗ್ರಹಿಸಿಟ್ಟ ಸಂಚಿತ ಸಯದಾನವನ್ನು ಹೊರಗೆ ತನ್ನಿರಿ. ಸೊಡ್ಡಳ ಬಾಚರಸರೆ." ಎಂದು ಗುರು ಬಸವಣ್ಣನವರು ಬಾಚರಸರಿಗೆ ಹೇಳುತ್ತಾರೆ.

1056. ಬೃಹತ್ ದಾಸೋಹ

ಕಂಡ ಮಂಡಗೆ ಬೆಲ್ಲ, ದ್ರಾಕ್ಷಿ, ಸಕ್ಕರೆ
ಸರಿಭಾಗವಾದ ಹೊಸ ಹೆಸರ ಭಕ್ಷ್ಯ ಪನ್ನಿರ್ಖಂಡುಗ;
ಸುಲಿಗಡಲೆಯ ಕಜ್ಜಾಯ ಹದಿನೆಂಟು ಖಂಡುಗ;
ಅಕಾಲ ಮಾವಿನ ಹಣ್ಣು ಇಪ್ಪತ್ತುನಾಲ್ಕು ಲಕ್ಷ;
ತವರಾಜ ಹೆತ್ತುಪ್ಪ; ಹಲಸಿನಹಣ್ಣು;
ಮನಮೇರೆ ಹಾಲಕೆನೆ ಹದಿನೆಂಟು ಖಂಡುಗ;
ಉತ್ತತ್ತಿ ಚೆಲುಪಾಲಘಟ್ಟ ಕಟ್ಟಣೆಯಿಲ್ಲ.
ಮನವೊಲಿದು ಕಜ್ಜಾಯವನಾರೋಗಣೆಯ ಮಾಡು ದೇವಾ,
ಲಿಂಗದೇವಾ. –ಬವದೀ. 1058

ಬಗೆಬಗೆಯ ಭಕ್ಷ್ಯಗಳನ್ನು ಮಾಡಿ ನೀಡಲಾಗುತ್ತಿದೆ. ಶರಣ ಸಮೂಹ ಉಣ್ಣುವುದನ್ನು ಕಂಡು ಗುರು ಬಸವಣ್ಣನವರಿಗೆ ಅಪಾರ ಆನಂದವಾಗುತ್ತಿದೆ. "ಲಿಂಗದೇವಾ, ಮನವೊಲಿದು ಕಜ್ಜಾಯ(ಸಿಹಿ)ವನ್ನು ಶರಣರ ಮೂಲಕ ಆರೋಗಣೆಯ ಮಾಡು" ಎಂದು ಉದ್ಗರಿಸುತ್ತಾರೆ.

1057. ಸಂತೋಷದಿಂದ ನೀಡಿ

ಕೈಹಾರ ನೀಡಿದಡೆ ಮನಹಾರ ಕೊಳ್ಳುತ್ತೈದಾನೆ
ಅಹುದಹುದು, ಸ್ವಾಮಿಯ ಹಸಿವು ಲೋಕಕ್ಕೆ ಹೊಸತು !
ಲಿಂಗದೇವ ನೆರೆ ಹಸಿದ, ಮೊರಮೊರದಲ್ಲಿ ನೀಡಿ ! –ಬವದೀ. 1059

"ಕೈ ತುಂಬ ಉಣ್ಣಲು ನೀಡಿದರೆ ಮನತುಂಬ ಉಣ್ಣುತ್ತಿದ್ದಾನೆ. ಅಹುದಹುದು. ದೇವರ ಹಸಿವು ಲೋಕಕ್ಕೆ ಹೊಸತು. ಲಿಂಗದೇವನು ಹಸಿದಿದ್ದಾನೆ. ಮೊರಮೊರದಲ್ಲಿ ನೀಡಿ" ಎಂದು ದಾಸೋಹದ ವೈಭವವನ್ನು ಕಂಡು ಹರ್ಷಿಸುತ್ತಾ ಅಡಿಗೆ ಮಾಡುವವರನ್ನು, ಎಡೆ ಮಾಡುವವರನ್ನು ಧರ್ಮಪಿತರು ಹುರಿದುಂಬಿಸುತ್ತಿದ್ದಾರೆ.

1058. ತ್ರೈಲಿಂಗ ಆಚಾರ

ಅಂಗದಲಳವಟ್ಟ ಲಿಂಗಕ್ಕೆ ಅಂಗವೆ ಭಾಜನ.
ಪ್ರಾಣದ ಮೇಲಣ ಲಿಂಗಕ್ಕೆ ಮನವೆ ಭಾಜನ
ಅರಿವಿನ ಮೇಲಣ ಲಿಂಗಕ್ಕೆ ನಿರ್ಭಾವವೇ ಭಾಜನ
ಲಿಂಗದೇವಯ್ಯಾ, ಪ್ರಭುದೇವರು ಆರೋಗಣೆಯ ಮಾಡುವರೆ
ಭಕ್ತಿ ಪರಿಯಾಣವಲ್ಲದೆ ಬೇರೆ ಭಾಜನವ ಕಾಣೆನು. –ಬವದೀ. 1060

ಲಿಂಗಗಳು ಮೂರು–ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂಬುದಾಗಿ. ಇವು ಕ್ರಮವಾಗಿ ಆಚಾರ. ಅರಿವು ಮತ್ತು ಅನುಭಾವಗಳ ಆಶ್ರಯದ ಮೇಲೆ ಇರುತ್ತವೆ. ಶರೀರದ ಮೇಲೆ ಇರುವ

ಆಚಾರಲಿಂಗವಾದ ಇಷ್ಟಲಿಂಗಕ್ಕೆ ಶರೀರವೇ ಆಶ್ರಯ. ಪ್ರಾಣವನ್ನೇ ವಾಹನವಾಗಿ ಮಾಡಿಕೊಂಡು ಕಾರ್ಯ ಮಾಡುವ ಪ್ರಾಣಲಿಂಗ (ಆತ್ಮ)ಕ್ಕೆ ಮನ ಎಂಬ ಅಂತರೀಂದ್ರಿಯವೇ ಆಶ್ರಯ(ಪಾತ್ರೆ). ಅರಿವನ್ನು ಪ್ರಮುಖವಾಗಿ ಹೊಂದಿದ ಮಹಾ(ಭಾವ)ಲಿಂಗಕ್ಕೆ ಭಾವವೇ ಆಶ್ರಯ. ಆಚಾರದ ಮೂಲಕ ಇಷ್ಟಲಿಂಗ ಸಾಧನೆ ಮಾಡಬೇಕು. ಅರಿವಿನ ಮೂಲಕ ಪ್ರಾಣಲಿಂಗ ಸಾಧನೆ ಮಾಡಬೇಕು. ಅನುಭೂತಿಯ ಮೂಲಕ ಭಾವಲಿಂಗ ಸಾಧನೆ ಮಾಡಬೇಕು. ಪ್ರಭುದೇವರನ್ನು ಸಂಪ್ರೀತಗೊಳಿಸಬೇಕಾದರೆ ನಿರ್ಮಲವಾದ ಭಕ್ತಿಯಿಂದ ಮಾತ್ರ ಸಾಧ್ಯ.

1059. ಜಂಗಮ–ಭಕ್ತ ಸಂಬಂಧ

ಭಕ್ತನ ಕಾಯವ ಜಂಗಮ ಧರಿಸಿಪ್ಪ ನೋಡಾ
ಜಂಗಮದ ಪ್ರಾಣವ ಭಕ್ತ ಧರಿಸಿಪ್ಪ ನೋಡಾ
ಭಕ್ತನಲ್ಲಿಯೂ ಭಕ್ತಜಂಗಮವೆರಡೂ ಸನ್ನಹಿತ,
ಜಂಗಮದಲ್ಲಿಯೂ ಜಂಗಮಭಕ್ತವೆರಡೂ ಸನ್ನಹಿತ.
ಜಂಗಮಕ್ಕಾದಡೂ ಭಕ್ತಿಯೇ ಬೇಕು,
ಭಕ್ತಂಗೆ ಭಕ್ತಿಸ್ಥಲವೆ ಬೇಕು
ಭಕ್ತನ ಅರ್ಥಪ್ರಾಣಾಭಿಮಾನಕ್ಕೆ ತಾನೆ ಕಾರಣನೆಂದು ಬಂದ ಜಂಗಮ,
ಆ ಭಕ್ತನ ಮನೆಗೆ ತಾನೆ ಕರ್ತನಾಗಿ ಹೊಕ್ಕು
ತನುಮನಧನಂಗಳೆಲ್ಲವನೊಳಗೊಂಡು
ಆ ಭಕ್ತನ ಪಾವನವ ಮಾಡಬಲ್ಲಡೆ ಆತ ಜಂಗಮವೆಂಬೆ.
ಆ ಜಂಗಮದ ಗಳಗರ್ಜನೆಗೆ ಸೈರಿಸಿ
ಮುಡುಹಿಂಗೆ ಮುನ್ನೂರು ಪಟ್ಟವ ಕಟ್ಟಿದಡೆ ಆತ ಭಕ್ತನೆಂಬೆ
ತನ್ನ ಮಠಕ್ಕೆ ತಾ ಬಹಡೆ ಮುನಿಸುಂಟೆ ?
ಲಿಂಗದೇವರ ಶರಣರ ಮನೆಯ ಬಾಗಿಲುಗಾಹಿ ನಾನಾಗಿರ್ದು
ಕರ್ತರು ಗೃಹಕ್ಕೆ ಬಂದಡೆ ಬೇಕು ಬೇಡೆನ್ನೆ. –ಬವದೀ. 1061

ಭಕ್ತ ಮತ್ತು ಜಂಗಮ–ಉಭಯತರ ಸಂಬಂಧ ಹೇಗಿರಬೇಕೆಂದರೆ ಶರೀರ ಮತ್ತು ಪ್ರಾಣದಂತೆ. ಭಕ್ತನ ಶರೀರದಂತೆ ಜಂಗಮ, ಜಂಗಮದ ಪ್ರಾಣದಂತೆ ಭಕ್ತ ಇರಬೇಕು. ಭಕ್ತಿ ಎಂಬ ತತ್ತ್ವವು ಜಂಗಮದಲ್ಲೂ ಇರಬೇಕು. ಭಕ್ತನಲ್ಲೂ ಇರಬೇಕು. ನಿಸ್ವಾರ್ಥಿಯಾದ ಜಂಗಮನು ಭಕ್ತನ ಸಂಪತ್ತು ಪ್ರಾಣ, ಅಭಿಮಾನಕ್ಕೆ ತಾನೇ ಒಡೆಯನೆಂದು ಭಾವಿಸಿ ಭಕ್ತನ ಮನೆಯನ್ನು ತಾನೆ ಒಡೆಯನಾಗಿ ಹೊಕ್ಕು ಭಕ್ತನ ತನುಮನಧನಗಳೆಲ್ಲವನ್ನು ಪಾವನ ಮಾಡಬಲ್ಲರೆ ಅವನು ನಿಜವಾದ ಜಂಗಮ. ಅಂಥ ಜಂಗಮನ ಗರ್ಜನೆಯನ್ನು ಸೈರಿಸಿಕೊಂಡು ಉಪಚರಿಸಬಲ್ಲಡೆ ಆತ ನಿಜವಾದ ಭಕ್ತ.

ನನ್ನ ಮಹಾಮನೆ ಅಂಥ ಭಕ್ತನ ಮಠ. ಜಂಗಮರೇ ಇದರ ಒಡೆಯರು. ಆದ್ದರಿಂದ ತಮ್ಮ ಮಠಕ್ಕೆ ತಾವು ಬರಲು ಅಪ್ಪಣೆ ಏಕೆ ? ಅನುಮಾನವೇಕೆ ? ನಾನು ಈ ಮಹಾಮನೆಯ ಬಾಗಿಲು ಕಾಯುವ ದ್ವಾರಪಾಲಕ ಅಷ್ಟೇ. ಶರಣರು ಬಂದರೆ ಬೇಕು ಎನ್ನೆ. ಬೇಡವೂ ಎನ್ನೆ.

1060. ಲಿಂಗಪೂಜಾನಂದದಲ್ಲಿ

ಕಾಯದ ಕೈಯಲ್ಲಿ ಕರಸ್ಥಲ
ಪ್ರಾಣದ ಕೈಯಲ್ಲಿ ಜಂಗಮಸ್ಥಲ
ಈ ಉಭಯ ಭಾವದ ಲಿಂಗಾರ್ಚನೆ
ಪರಮಾನಂದ ಸುಖಸ್ಥಲ,
ಕಾಯ ಭಕ್ತ ; ಪ್ರಾಣ ಜಂಗಮ ;
ಆವುದ ಘನವೆಂಬೆನಾವುದ ಕಿರಿದೆಂಬೆ ?
ಲಿಂಗದೇವನ ಶರಣರು ಬಂದಡೆ, ಉಪಚಾರಕ್ಕೆ ಇಂಬಿಲ್ಲ ;
ಕರುಣದಿಂದ ಬರಹೇಳಾ, ಅಪ್ಪಣ್ಣಾ. –ಬವದೀ. 1062

ಅಲ್ಲಮ ಪ್ರಭುದೇವರು ಮಹಾಮನೆಗೆ ಬಂದಾಗ ಶ್ರೀ ಗುರು ಬಸವಣ್ಣನವರು ಇಷ್ಟಲಿಂಗಾರ್ಚನೆಯಲ್ಲಿ ತಲ್ಲೀನರಾಗಿರುವರು. ಇಷ್ಟು ಹೊತ್ತು ಪೂಜೆ, ಇನ್ನಷ್ಟು ಹೊತ್ತು ಜಪ-ಧ್ಯಾನ ಹೀಗೆ ನಿಯಮ ಇಟ್ಟುಕೊಂಡಿರಬಹುದು. ಅಪ್ಪಣ್ಣನವರು ಅವಸರದಿಂದ ಬಂದು ಪ್ರಭುದೇವರು ಆಗಮಿಸಿದ ಸುದ್ದಿ ತಿಳಿಸುವರು.

"ನನ್ನ ಶರೀರದ ಕೈಯಲ್ಲಿ ಇಷ್ಟಲಿಂಗವಿದೆ, ಪ್ರಾಣವು ಆತ್ಮಾನುಸಂಧಾನದಲ್ಲಿ ತೊಡಗಿದೆ." ಪರಮಾನಂದ ಸುಖದ ಹೊಳೆಯಲ್ಲಿ ತೇಲುತ್ತಲಿದ್ದೇನೆ. ನನ್ನ ಕಾಯವೇ ಭಕ್ತನಾಗಿದೆ; ಪ್ರಾಣವೇ ಜಂಗಮವಾಗಿದೆ. ಪ್ರಭುದೇವರಂಥ ಮಹಿಮರು ನನ್ನ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಲ್ಲರು. ಶರಣರು ತಮ್ಮ ಮನೆಗೆ ತಾವು ಬಂದಾಗ ಉಪಚಾರಕ್ಕೆ ಆಸ್ಪದವಿಲ್ಲ. ಆದ್ದರಿಂದ ಅಪ್ಪಣ್ಣನವರೇ ಕರುಣೆ ಇಟ್ಟು ಒಳಗೆ ಬರಲು ಹೇಳಿರಿ." ಎಂದು ಗುರು ಬಸವಣ್ಣನವರು ನುಡಿಯುವರು.

1061. ಜಂಗಮ-ಭಕ್ತನ ಮಧುರ ಸಂಬಂಧ

ಮಾಡುವ ಮಾಡಿಸಿಕೊಂಬ ಎರಡರ ನಡುವೆ
ಸಂದುಭೇದ ಉಂಟೆ ದೇವಾ
ಕಾಯ ಪ್ರಾಣದ ಸಂಗದಂತೆ ಇದ್ದುದಲ್ಲದೆ ?
ಬಲ್ಲಂತೆ ಮಾಡು, ಬಲ್ಲಂತೆ ನೀಡು;
ನಾನರಿಯೆನೆಂಬುದು ನಿಮಗುಚಿತವೆ ?
ಮಾಡುವಲ್ಲಿ ನೀಡುವಲ್ಲಿ ಹೇಳಿ ಮಾಡಿಸಿಕೊಂಬುದಲ್ಲದೆ
ಕೈಕಲಸಿದಡೆ ಬಾಯಿಗೆ ಹಂಗುಂಟೆ ಲಿಂಗದೇವಾ? -ಬವದೀ. 1063

ಭಕ್ತಿ, ಉಪಚಾರ ಮಾಡುವವನು ಭಕ್ತ, ಮಾಡಿಸಿಕೊಳ್ಳುವವನು ಜಂಗಮ. ಇಬ್ಬರ ಮಧ್ಯೆ ಸಂಕೋಚವಿರಬಾರದು, ವಿಶ್ವಾಸವಿರಬೇಕು. ಇಬ್ಬರ ಸಂಬಂಧ ಶರೀರ ಮತ್ತು ಪ್ರಾಣದಂತೆ ಇರಬೇಕು. ಭಕ್ತನಿಗೆ ಜಂಗಮ, "ನಿನಗೆ ತಿಳಿದಂತೆ ಮಾಡು, ನಿನಗೆ ಮನ ಬಂದಂತೆ ನೀಡು." ಎಂದು ಮಾತನಾಡಬಾರದು. ಮಾಡುವಲ್ಲಿ, ನೀಡುವಲ್ಲಿ ಹೇಳಿ ಮಾಡಿಸಿಕೊಳ್ಳಬೇಕು. ಕೈಕಲಸುತ್ತ ಇದ್ದರೆ ಜಗಿಯಲಿಕ್ಕೆ ಬಾಯಿಗೆ ತೊಂದರೆ ಏನೂ ಇಲ್ಲವಷ್ಟೆ ?! ಭಕ್ತನಿಂದ ಜಂಗಮ ಸೇವೆಯನ್ನು ಕೇಳಿ ಪಡೆಯಬೇಕು.

1062. ಜೇನಿನ ಆದರ್ಶ

ಬಾಳತ್ವಕ್ಕೆಂದು ಮಧುವ ತಂದು
ಕೊಡನ ತುಂಬಿದ ಜೇನ ಹುಳುವಿನಂತೆ
ತಾನುಂಬುದು, ತನ್ನೆಂಜಲ ಜಗವುಂಬುದು ನೋಡಯ್ಯಾ,
ಶಿವಭಕ್ತನಾಗಿ ಶಿವಾನ್ನವನೆ ಕೊಂಡು,
ಒಕ್ಕಮಿಕ್ಕ ವಸ್ತುವ ಜಂಗಮಕ್ಕಿಕ್ಕುವಾತನೆ ಭಕ್ತ ;
ಕೊಂಡಾತನೆ ಜಂಗಮ.
ನಡುವೆ ನೀ ಬಂದು ಭಂಡುಮಾಡದಿರ್ಬೈ, ಲಿಂಗದೇವಾ. -ಬವದೀ. 1064

ಬಹಳ ಸುಂದರ ಮತ್ತು ಅರ್ಥ ಗರ್ಭಿತವಾಗಿದೆ ಈ ವಚನ. ಬಾಳುವುದಕ್ಕೆಂದು ಮಕರಂದವನ್ನು ತಂದು ಜೇಂಗೊಡವನ್ನು ಜೇನು ಹುಳ ತುಂಬುವುದು. ತಾನೂ ಆ ಜೇನುತುಪ್ಪವನ್ನು ಕುಡಿಯುವುದು. ಅದು ಕುಡಿದು ಬಿಟ್ಟುದನ್ನು ಜಗತ್ತು ಕುಡಿಯುವುದು. ಹಾಗೆ ಶರಣನು ಪ್ರಾಮಾಣಿಕವಾಗಿ ಕಾಯಕವನ್ನು ಮಾಡಿ ಗಳಿಸಿದ್ದು ಶಿವಾನ್ನ (Divine food). ತಾನು ಗಳಿಸಿದ್ದರಲ್ಲಿ ತನ್ನ ಬಾಳ್ವೆಗೆ ಅಗತ್ಯವಿರುವಷ್ಟನ್ನು ತಾನು ಬಳಸಿಕೊಂಡು ಉಳಿದುದನ್ನು ಸಮಾಜಕ್ಕೆ ಸಲ್ಲಿಸುವಾತನೇ ಭಕ್ತ ; ಭಕ್ತನು ಸಲ್ಲಿಸಿದುದನ್ನು ಸ್ವೀಕರಿಸುವಾತನೇ ಜಂಗಮ. ಭಕ್ತನು ತನಗಿಲ್ಲದಂತೆ ಮಾಡಿಕೊಂಡು, ಸಾಲ ಮಾಡಿಕೊಂಡು ಜಂಗಮನಿಗೆ ಕೊಡಬೇಕಿಲ್ಲ. ಜಂಗಮನು ಒತ್ತಾಯದಿಂದ ಹಿಂಸಿಸಿ, ತಲೆಗಂದಾಯದಂತೆ ಭಕ್ತನಿಂದ ವಸೂಲಿ ಮಾಡಬೇಕಿಲ್ಲ.

ಇದು ಬಸವ ಸಿದ್ಧಾಂತ. "ನಡುವೆ ನೀ ಬಂದು ಭಂಡು ಮಾಡದಿರ್ಬೈ ಲಿಂಗದೇವಾ' ಎಂದು ಹಾಸ್ಯದ ದಾಟಿಯಲ್ಲಿ ಗುರು ಬಸವಣ್ಣನವರು ನುಡಿಯಾಡುತ್ತಾರೆ.

1063. ಜ್ಞಾನವೇ ಶಕ್ತಿ

ಜಂಗಮನೇ ಜ್ಞಾನರೂಪು, ಭಕ್ತನೆ ಆಚಾರ ರೂಪು ಎಂಬುದು
ತಪ್ಪದು ನೋಡಯ್ಯಾ,
ನಾನು ನಿಮ್ಮಲ್ಲಿ ಆಚಾರಿಯಾದಡೇನಯ್ಯಾ, ಜ್ಞಾನವಿಲ್ಲದನ್ನಕ್ಕರ ?
ತಲೆಯಿಲ್ಲದ ಮುಂಡದಂತೆ, ಜ್ಞಾನ ಉದಯವಾಗದ ಮುನ್ನವೆ
ತಲೆದೋರುವ ಆಚಾರವುಂಟೆ ಜಗದೊಳಗೆ ?
ಜ್ಞಾನದಿಂದ ಆಚಾರ, ಜ್ಞಾನದಿಂದ ಅನುಭಾವ,
ಜ್ಞಾನದಿಂದ ಪ್ರಸಾದವಲ್ಲದೆ,
ಜ್ಞಾನವನುಳಿದು ತೋರುವ ಘನವ ಕಾಣೆನು.
ಎನ್ನ ಆಚಾರಕ್ಕೆ ನೀನು ಜ್ಞಾನರೂಪವಾದ ಕಾರಣ
ಸಂಗನ ಬಸವಣ್ಣನೆಂಬ ಹೆಸರುವಡೆದೆನು.
ಅನಾದಿ ಪರಶಿವನು ನೀನೆ ಆಗಿ,
ಘನಚೈತನ್ಯಾತ್ಮಕನೆಂಬ ಮಹಾಜ್ಞಾನವು ನೀನೆ ಆದೆಯಲ್ಲದೆ,
ನಾನೆತ್ತ, ಶಿವತತ್ತ್ವವೆತ್ತಯ್ಯಾ ?
ಲಿಂಗದೇವಾ ನೀ ಸಾಕ್ಷಿಯಾಗಿ,
ಮೂರುಲೋಕವೆಲ್ಲವು ಬಲ್ಲುದು ಕಾಣಾ, ಪ್ರಭುವೆ ! -ಬವದೀ. 1065

ಭಕ್ತನ ಲಕ್ಷಣ ಸದಾಚಾರ, ಜಂಗಮದ ಲಕ್ಷಣ ಸುಜ್ಞಾನ. ನಾನು ಸದಾಚಾರ ಸಂಪನ್ನನಾದೊಡೇನು ಜ್ಞಾನದ ಚಿತ್ಕಳೆ ಇಲ್ಲದೆ ಇದ್ದರೆ. ಜ್ಞಾನವಿಲ್ಲದ ಆಚಾರ ತಲೆ ಇಲ್ಲದ ಮುಂಡ(ಶರೀರ)ದಂತೆ. ಜ್ಞಾನದಿಂದಲೇ ಆಚಾರಕ್ಕೆ ಜೀವಂತಿಕೆ ಬರುವುದು; ಜ್ಞಾನದಿಂದಲೇ ಅನುಭಾವ, ಜ್ಞಾನದಿಂದಲೇ ಪ್ರಸಾದ. ನನ್ನ ಆಚಾರಕ್ಕೆ ನೀನು ಜ್ಞಾನರೂಪಾಗಿರುವ ಕಾರಣ ನನಗೆ ಸಂಗನಬಸವಣ್ಣ ಎಂಬ ಹೆಸರು ಬಂದಿತು. ನೀವಿತ್ತ ಜ್ಞಾನದಿಂದ ನಾನು ತತ್ತ್ವವನ್ನರಿತೆ ಎಂಬುದನ್ನು ಲಿಂಗದೇವ ಸಾಕ್ಷಿಯಾಗಿ ಮೂರು ಲೋಕವೆಲ್ಲವು ಬಲ್ಲುದು ಕಾಣಾ ಪ್ರಭುವೆ !

1064. ಲಿಂಗಪೂಜೆ-ಜಂಗಮನಿಂದೆ ಸಲ್ಲದು

ಭೇರುಂಡದ ಪಕ್ಷಿಗೆ ದೇಹ ಒಂದೆ,
ತಲೆಯೆರಡರ ನಡುವೆ ಕನ್ನಡವ ಕಟ್ಟಿ
ಒಂದು ತಲೆಯಲ್ಲಿ ಹಾಲನೆರೆದು
ಒಂದು ತಲೆಯಲ್ಲಿ ವಿಷವನೆರೆದಡೆ
ದೇಹವೊಂದೇ ವಿಷ ಬಿಡುವುದೆ ಅಯ್ಯಾ ?
ಲಿಂಗದಲ್ಲಿ ಪೂಜೆಯ ಮಾಡಿ ಜಂಗಮದಲ್ಲಿ ನಿಂದೆಯ ಮಾಡಿದಡೆ
ನಾನು ಬೆಂದೆ ಕಾಣಾ, ಲಿಂಗದೇವಾ. -ಬವದೀ. 1066

ಗಂಡಭೇರುಂಡ ಎಂಬ ಪಕ್ಷಿಗೆ ಶರೀರ ಒಂದೆ ತಲೆ ಮಾತ್ರ ಎರಡು. ತಲೆ ಎರಡರ ನಡುವೆ ಒಂದು ಆವರಣ (ತೆರೆ)ವನ್ನು ಕಟ್ಟಿ ಒಂದು ಬಾಯಿಯಲ್ಲಿ ಹಾಲನ್ನು ಇನ್ನೊಂದು ಬಾಯಿಯಲ್ಲಿ ವಿಷವನ್ನು ಎರೆದರೆ ಆ ಪಕ್ಷಿ ಬದುಕುವುದೆ ? ಹಾಗೆ ಸಮಾಜ ಎಂಬುದೇ ಶರೀರ. ಇದಕ್ಕೆ ಲಿಂಗದೇವನು ಒಂದು ಬಾಯಿ, ಜಂಗಮವು ಇನ್ನೊಂದು ಬಾಯಿ. ಭಕ್ತನು ಕೇವಲ ಲಿಂಗಪೂಜಾನಿಷ್ಠನಾಗಿದ್ದರೆ ಸಾಲದು. ಜಂಗಮ ಸೇವಾಸಕ್ತನೂ ಆಗಬೇಕು. ಲಿಂಗಪೂಜೆಯನ್ನು ಮಾಡಿ ಜಂಗಮ ನಿಂದೆಯನ್ನು ಮಾಡುತ್ತಿದ್ದರೆ ಅವರ ಪೂಜೆ ನಿಷ್ಫಲವಾಗುವುದು. ಸಮಾಜಕ್ಕಾಗಿ ದುಡಿಯುವ ವ್ಯಕ್ತಿ ಜಂಗಮ ; ಅವನ ನಿಂದೆಯಿಂದ ಸಮಾಜಕ್ಕೆ ಹಾನಿಯಾಗುವುದು.

1065. ಲಿಂಗದಲ್ಲಿ ಜಂಗಮ ದರ್ಶನ

ಲಿಂಗದಲ್ಲಿ ಹೊಳೆದು ಹೋಹ ಜಂಗಮವ ಕಂಡು ಬಿಟ್ಟಡೆ
ಭವ ಹೊದ್ದಿತ್ತಯ್ಯಾ ಎನ್ನ ಭಕ್ತಿಗೆ.
ಹಿಂದೆ ಲಿಂಗವನಗಲಿದ ಕಾರಣ ಬಂದೆನೀ ಜನ್ಮಕ್ಕೆ.
ಲಿಂಗದೇವಯ್ಯ ತಪ್ಪಿಹೋಗದ ಮುನ್ನ ಹಿಡಿದು ತನ್ನಿ. –ಬವದೀ. 1067

ಲಿಂಗಪೂಜಾ ನಿಷ್ಠರಿಗೆ ಬಗೆಬಗೆಯ ದಿವ್ಯಾನುಭವಗಳಾಗುತ್ತವೆ. ಅವುಗಳಲ್ಲಿ ಜಂಗಮರ ದರ್ಶನವು ಒಂದು. ಇಷ್ಟಲಿಂಗ ದರ್ಪಣದಲ್ಲಿ ಲಿಂಗಾಂಗ ಯೋಗಿಗಳ ದರ್ಶನವಾಗುತ್ತದೆ. ಅವರು ಬರುವ ಮುನ್ಸೂಚನೆ ಕಾಣಬರುತ್ತದೆ. ಅಂಥವರನ್ನು ಬರಮಾಡಿಕೊಂಡು ಉಪಚರಿಸದಿದ್ದಡೆ ನನ್ನ ಭಕ್ತಿಗೆ ಚ್ಯುತಿ ಬರುತ್ತದೆ. ಇಂದಿನ ಜನ್ಮ ಬರಲು ಕಾರಣವೆಂದರೆ ಹಿಂದಿನ ಜನ್ಮದಲ್ಲಿ ಲಿಂಗವ ಮರೆದುದರಿಂದ, ಜಂಗಮವ ಮರೆದುದರಿಂದ. ಆದ್ದರಿಂದ ಲಿಂಗದೇವನು ನಮ್ಮ ಕೈ ತಪ್ಪಿ ಹೋಗಬಾರದೆಂದಿದ್ದರೆ ಜಂಗಮದ ದರ್ಶನ, ಸೇವೆ ನಡೆಯಲೇಬೇಕು.

1066. ಮನದ ನೈರ್ಮಲ್ಯ ಮುಖ್ಯ

ತನುವೆಂತಿರ್ದಡೇನಯ್ಯಾ ಮನ ನಿರ್ಮಳವಾಗಿರ್ದಡೆ ಸಾಲದೆ ?
ಎಂತಿರ್ದಡೇನು ಲಿಂಗಭಕ್ತ, ಎಂತಿರ್ದಡೇನು ಲಿಂಗ ಶರಣ?
ಎಂತಿರ್ದಡೇನು ನೋಡಯ್ಯಾ :
ಶಿಶು ನೊಂದಡೆ ತಾಯಿ ನೊಂದಂತೆ ಲಿಂಗದೇವಾ. –ಬವದೀ. 1068

ಶರೀರ ಕೊಳೆಯಾಗಿರ್ದಡೇನು, ಅನಾಚಾರಿಯಾಗಿದ್ದರೇನು ಮನಸ್ಸು ನಿರ್ಮಲ ವಾಗಿದ್ದರೆ ಸಾಕು ಎಂಬರ್ಥದಲ್ಲಿ ಈ ವಚನದ ಮೊದಲ ವಾಕ್ಯವನ್ನು ಧರ್ಮಪಿತರು ಬರೆದಿರಲಿಕ್ಕಿಲ್ಲ. ಏಕೆಂದರೆ ಬಸವ ಧರ್ಮವು ಆಚಾರ ಪ್ರಧಾನವಾದ ಧರ್ಮ. ಜಂಗಮನು ಬಡ(ಮಠ)ವನಿರಬಹುದು; ನೋಡಲು ಕುರೂಪಿಯಾಗಿರಬಹುದು. ಅಂಗವಿಕಲನಿರಬಹುದು, ಕುರುಡ–ಕುಂಟನಿರಬಹುದು. ಅವನನ್ನು ಬಹಿರಂಗದ ಲಕ್ಷಣಗಳಿಂದ ಅಳೆಯದೆ ಅವನ ಜ್ಞಾನದಿಂದ, ಅವನ ಅಂತಃಕರಣ ಶುದ್ಧಿಯಿಂದ ಅಳೆಯಬೇಕು. ಆದ್ದರಿಂದ ಲಿಂಗಭಕ್ತರಿಗೆ, ಲಿಂಗ ಶರಣರಿಗೆ ಮೂದಲಿಸಿ ಅವಮಾನ ಮಾಡಬಾರದು. ಗರ್ಭದಲ್ಲಿರುವ ಮಗುವಿಗೆ ಏನಾದರೂ ತೊಂದರೆಯಾದರೆ ತಾಯಿಗೆ ನೋವಾಗಿ ತೊಂದರೆಯಾಗುವಂತೆ ಭಕ್ತರಿಗೆ ನೋವಾದರೆ ಲಿಂಗದೇವನಿಗೇ ನೋವಾಗುವುದು. ಭಕ್ತರಿಗೆ, ಶರಣರಿಗೆ ಅವಮಾನವಾದರೆ ಲಿಂಗದೇವನನ್ನೇ ಅವಮಾನಿಸಿದಂತಾಗುವುದು.

1067. ದೇವರಲ್ಲಿ ಶರಣಾಗತಿ

ಮೂರ್ತಿಯ ಮುಂದಣ ಮೂವರದೇನೋ !
ಸನಕ ಸನಂದಾದಿಗಳಿಂದತ್ತತ್ತಲು ನೋಡಾ.
ಲಿಂಗದೇವಾ, ನಾನಾಳು ನೀನಾಳ್ದ ಕಂಡಯ್ಯಾ –ಬವದೀ. 1069

ಪರಮಾತ್ಮ ಎಂಬ ಆತ್ಯಂತಿಕ ಶಕ್ತಿಯ ಮುಂದೆ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ರುದ್ರರು ಎಷ್ಟರವರು! ಆದರೆ ಅವರು ನಾನೇ. ದೇವರು ಎಂದುಕೊಳ್ಳುವರು. ಸನಕ ಸನಂದಾದಿ ಮುನಿಗಳು ಕೇವಲ ತಪಸ್ಸು ಮಾಡಿದರೇ ವಿನಾ ದೇವರಿಗೆ ಶರಣಾಗಲಿಲ್ಲ. ಲಿಂಗದೇವಾ, ನಾನು ಮಾತ್ರ ನಿನ್ನನ್ನು ದೃಢವಾಗಿ ನಂಬಿದ್ದೇನೆ. ನಾನು ಸೇವಕ, ನೀನು ಒಡೆಯ ಎಂದು ತಿಳಿದಿದ್ದೇನೆ.

ಲಿಂಗಾಯತ ಧರ್ಮವು ಸೃಷ್ಟಿಕರ್ತ ಲಿಂಗದೇವನಿಗೆ ಮಹತ್ವವನ್ನು, ಪರಮೋನ್ನತ ಸ್ಥಾನವನ್ನು ಕೊಡುವ ಸೇಶ್ವರವಾದಿ ಧರ್ಮ.

1068. ಜಂಗಮವೇ ಪ್ರಾಣಲಿಂಗ

ಎಲ್ಲರ ಪ್ರಾಣಲಿಂಗ ಒಂದೆ ಕಂಡಯ್ಯಾ
ಎನ್ನ ಪ್ರಾಣಲಿಂಗ ಬೇರೆ ಕಂಡಯ್ಯಾ

ಲಿಂಗದೇವ ಕೇಳಯ್ಯಾ,
ಜಂಗಮವೆನ್ನ ಪ್ರಾಣಲಿಂಗ ಕಂಡಯ್ಯಾ –ಬವದೀ. 1070

ಎಲ್ಲರ ಪ್ರಾಣಲಿಂಗವು ಆತ್ಮವೇ ಆಗಿದೆ. ನನ್ನ ಪ್ರಾಣಲಿಂಗವು ಬೇರೆಯೇ ಇದೆ. ಲಿಂಗದೇವ ಕೇಳು, ನನ್ನ ಪ್ರಾಣ ಜಂಗಮವೇ ಆಗಿದೆ. ಇಲ್ಲಿ ಜಂಗಮವೆಂದರೆ ಸಮಾಜ, ಶರಣ ಸಮೂಹ, ತ್ಯಾಗಿಗಳು, ಧರ್ಮ ಪ್ರಚಾರಕರು.

1069. ತ್ರಿವಿಧ ಶುದ್ಧಿ

ಗುರುವಿಂಗೆ ತನುವ ಕೊಟ್ಟು, ಲಿಂಗಕ್ಕೆ ಮನವ ಕೊಟ್ಟು
ಜಂಗಮಕ್ಕೆ ಧನವ ಕೊಟ್ಟು
ಇಂತೀ ತ್ರಿವಿಧಕ್ಕೆ ತ್ರಿವಿಧವ ಕೊಟ್ಟು ನಾನು ಶುದ್ಧನಾದೆನು
ಕಾಣಾ, ಲಿಂಗದೇವಾ –ಬವದೀ. 1071

ಗುರು–ಶಿಷ್ಯ, ಗುರು–ಭಕ್ತ ಸಂಬಂಧ ಪರಿಶುದ್ಧ. ಉತ್ತಮರಾದ ಗುರುಗಳು ಸಿಕ್ಕಾಗ ಶಿಷ್ಯರು (ಭಕ್ತರು) ತನುವಿನಿಂದ ಗುರುಗಳ ಸೇವೆ ಮಾಡಬೇಕು. ಅವರ ಪಾದ ಒತ್ತುವುದು. ಮೈಗೆ ಎಣ್ಣೆ ತಿಕ್ಕುವುದು, ಅಭ್ಯಂಗನ ಸ್ನಾನ ಮಾಡಿಸುವುದು, ಊಟೋಪಚಾರ ಮಾಡಿಸುವುದು ತನುವಿನಿಂದ ಮಾಡುವ ಸೇವೆ ಆಗುತ್ತದೆ.

ಇನ್ನು ಗುರು ಎಂಬಲ್ಲಿ ಧರ್ಮಗುರು ಎಂದು ತೆಗೆದುಕೊಂಡರೆ ತನುವನ್ನು ಧರ್ಮಪ್ರಚಾರದಲ್ಲಿ ತೊಡಗಿಸಿಕೊಳ್ಳುವುದಾಗಿರುತ್ತದೆ. ಗುರು ಬಸವಣ್ಣನವರಿಗೆ ಉಣ್ಣಿಸುವುದು, ಉಪಚರಿಸುವುದು ಸಾಧ್ಯವಿಲ್ಲ. ಬಸವ ಭಕ್ತರ ಸೇವೆ ಮಾಡಿದರೆ ಗುರು ಬಸವಣ್ಣನವರ ಸೇವೆ ಮಾಡಿದಂತೆ. ಶರಣ ಮೇಳದ ದಾಸೋಹದಲ್ಲಿ ಪ್ರಸಾದ ಎಡೆಮಾಡಿದರೆ ಗುರು ಬಸವಣ್ಣನವರಿಗೇ ಉಣ್ಣಿಸಿದಂತೆ, ತನುವಿನ ಸೇವೆ ಬಹಳ ಪುಣ್ಯದಾಯಕ.

ಮನವನ್ನು ಲಿಂಗದೇವನಿಗೆ ಸಮರ್ಪಿಸಬೇಕು. ಮನಮುಟ್ಟಿ ಇಷ್ಟಲಿಂಗಾರ್ಚನೆ ಮಾಡಬೇಕು. ಸಂಪತ್ತನ್ನು ಜಂಗಮಕ್ಕೆ ಸಲ್ಲಿಸಬೇಕು. ಜಂಗಮಕ್ಕೆ ಅಂದರೆ ಧರ್ಮದ ಉದ್ದೀಪನೆಗೆ, ಸಮಾಜ ಸೇವೆಗೆ, ತ್ಯಾಗಿಗಳ ಕೆಲಸಕ್ಕೆ, ಧರ್ಮ ಪ್ರಚಾರಕ್ಕೆ, ವಚನ ಸಾಹಿತ್ಯ ಪ್ರಚಾರಕ್ಕೆ ವಿನಿಯೋಗಿಸಬೇಕು. ತನು–ಮನ–ಧನ ಮೂರು ಸಂಪತ್ತು. ಮೂರರಿಂದಲೂ ಸೇವೆ ಮಾಡುವುದು ಸರ್ವಶ್ರೇಷ್ಠ. ತನುವನ್ನು ಸೇವೆಯಲ್ಲಿ, ಸತ್ಸಂಗದಲ್ಲಿ ತೊಡಗಿಸಬೇಕು. ಕೈಲಾದಷ್ಟು ಧನವನ್ನು ದಾನ ಮಾಡಬೇಕು. ನಿತ್ಯವೂ ಲಿಂಗಾರ್ಚನೆ ಮಾಡಬೇಕು. ಮೂರನ್ನು ತೊಡಗಿಸುವು ಉತ್ತಮ. ಎರಡನ್ನು ತೊಡಗಿಸುವುದು ಮಧ್ಯಮ. ಕೇವಲ ಧನವನ್ನು ಮಾತ್ರ ನೀಡುವುದು, ತಾನು ಭಾಗಿಯಾಗದೆ ಇರುವುದು ಕನಿಷ್ಠ. ಯಾವುದೊಂದನ್ನೂ ತೊಡಗಿಸದಿರುವುದು ಅಧಮ. ಹೀಗೆ ತನು–ಮನ–ಧನಗಳನ್ನು ಗುರು–ಲಿಂಗ–ಜಂಗಮಕ್ಕೆ ಕೊಟ್ಟು ನಾನು ಶುದ್ಧನಾದೆ ಎನ್ನುತ್ತಾರೆ ಗುರು ಬಸವಣ್ಣನವರು.

1070. ಜಂಗಮವೇ ಸುಂಕಿಗ

ಭಂಡವ ತುಂಬಿದ ಬಳಿದ
ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು.
ಲಿಂಗಸಂಬಂಧಿಯಾದಡೆ ಜಂಗಮಪ್ರೇಮಿ ನೀನಾಗು,
ಅಲ್ಲದಿದ್ದಡೆ ಪರುಷ ದೊರೆಕೊಳ್ಳದಯ್ಯಾ
ಜಂಗಮದಲ್ಲಿ ನಿರುತ ಭರಿತ. ಲಿಂಗದೇವ. –ಬವದೀ. 1072

ಸಂಪತ್ತನ್ನು ತುಂಬಿಕೊಂಡು ವ್ಯಾಪಾರ ಮಾಡಲು ಹೋಗುವ ವಣಿಕನು ಬೇರೆ ರಾಜ್ಯಗಳನ್ನು ಪ್ರವೇಶ ಮಾಡುವಾಗ, ಪುರಗಳನ್ನು ಪ್ರವೇಶ ಮಾಡುವಾಗ ಸುಂಕದ ಕಟ್ಟೆಯಲ್ಲಿ ಸುಂಕವನ್ನು ಕಟ್ಟಬೇಕಾಗುತ್ತದೆ. ಹಾಗೆಯೇ ಹೋಗುವುದು ಅಕ್ರಮವಾಗುತ್ತದೆ. ಹಾಗೆ ಲಿಂಗದೇವನ ಪ್ರೇಮವನ್ನು ಪಡೆದುಕೊಳ್ಳಬೇಕಾದರೆ ಜಂಗಮ ಭಕ್ತಿ ಎಂಬ ಸುಂಕ ಕಟ್ಟಬೇಕಾಗುತ್ತದೆ. ನಾವು ಬಯಸಿದ್ದೆಲ್ಲವನ್ನೂ ಕೊಡುವ 'ಪರುಷ' ಬೇಕಾಗಿದ್ದರೆ ಜಂಗಮಭಕ್ತಿ ಮಾಡಬೇಕು. ಏಕೆಂದರೆ ಲಿಂಗದೇವನು ಜಂಗಮದಲ್ಲಿ ಭರಿತನಾಗಿದ್ದಾನೆ.

1071. ದಶವಿಧ ಪಾದೋದಕ ಸ್ವೀಕಾರ

ದಶವಿಧ ಪಾದೋದಕವೆಸಗಿದ ರಸಿಕ ಎಂತೆಂದಡೆ :
ಗುರುಲಿಂಗ ಜಂಗಮ ಪಾದೋದಕ ಪ್ರಸಾದ ವಿಭೂತಿ
ರುದ್ರಾಕ್ಷಿ ಪಂಚಾಕ್ಷರಿ ಗಣವ್ರತನೇಮ ಆಚಾರ ಶೀಲ
ಸಂಬಂಧದೊಳಗು ಹೊರಗು ತ್ರಿವಿಧ ಸಂಪೂರ್ಣವಾದ ಕಾರಣ
ನಿತ್ಯಪಾದೋದಕವೆನಿಸಿತ್ತು ಲಿಂಗದೇವ.

–ಬವದೀ. 1073

ಶರಣನು ದಶವಿಧ ಪಾದೋದಕವನ್ನು ನಿತ್ಯವೂ ತೆಗೆದುಕೊಳ್ಳಬೇಕು. ಅವು ಯಾವುವೆಂದರೆ ಗುರುಲಿಂಗಜಂಗಮ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರ ಗಣವ್ರತ ನೇಮ, ಆಚಾರ ಶೀಲ. ಇವನ್ನು ಆಚರಣೆ ಮಾಡುವುದೇ ನಿತ್ಯ ಪಾದೋದಕ ಸ್ವೀಕಾರ.

1072. ಚತುರ್ವಿಧ ಸಂಪದವ ಮೆರೆಯಬೇಕು.

ಗುರು ಸ್ವಾಯತವಾದ ಬಳಿಕ ಗುರುವ ಮೆರೆಯಬೇಕಯ್ಯಾ
ಲಿಂಗ ಸ್ವಾಯತವಾದ ಬಳಿಕ ಲಿಂಗವ ಮೆರೆಯಬೇಕಯ್ಯಾ
ಜಂಗಮ ಸ್ವಾಯತವಾದ ಬಳಿಕ ಜಂಗಮವ ಮೆರೆಯಬೇಕಯ್ಯಾ
ಪ್ರಸಾದ ಸ್ವಾಯತವಾದ ಬಳಿಕ ಪ್ರಸಾದವ ಮೆರೆಯಬೇಕಯ್ಯಾ
ಇಂತೀ ಗುರು ಲಿಂಗಜಂಗಮ ಪ್ರಸಾದದಲ್ಲಿ ಪರಿಣಾಮಿಯಾಗಿ
ಸಮಯ ಭಕ್ತಿಯಲ್ಲಿ ಸಂತೋಷಿಯಾಗಿ ಬದುಕಿದೆನು
ಕಾಣಾ ಲಿಂಗದೇವಾ.

–ಬವದೀ. 1074

ಕರ್ನಾಟಕ ವಿಶ್ವವಿದ್ಯಾಲಯದ ಅಧಿಕೃತ ಪ್ರಕಟಣೆ (ಬ.ಷ.ಹೆ.ವ–1083)ಯಲ್ಲಿ ಗುರುವ, ಲಿಂಗವ, ಜಂಗಮವ, ಪ್ರಸಾದವ ಮರೆಯಬೇಕಯ್ಯ ಎಂದಿದೆ. ಇದು ತಪ್ಪು. ಮರೆಯಬೇಕಯ್ಯ ಎಂಬುದರ ಬದಲಿಗೆ ಮೆರೆಯಬೇಕಯ್ಯ ಎಂದು ಆದರೆ ಆಗ ವಾಕ್ಯಗಳು ಅರ್ಥಪೂರಿತವಾಗುತ್ತವೆ. ಈಗ ಈ ವಚನವನ್ನು ಅರ್ಥ ಮಾಡೋಣ.

ಗುರುತತ್ತ್ವವನ್ನು ಅಳವಡಿಸಿಕೊಂಡ ಮೇಲೆ ಗುರುವಿನ ಹಿರಿಮೆಯನ್ನು ಮೆರೆಸಬೇಕು. ಹಿಗ್ಗಿನಿಂದ ಗುರುವಿನ ಮಹಿಮೆಯನ್ನು ಸಂಕೋಚವಿಲ್ಲದೆ ಕೊಂಡಾಡಬೇಕು. ಲಿಂಗತತ್ತ್ವವನ್ನು ಅಳವಡಿಸಿಕೊಂಡ ಮೇಲೆ ಹಿಗ್ಗಿನಿಂದ, ಹೆಮ್ಮೆಯಿಂದ ಇಷ್ಟಲಿಂಗದ ಶ್ರೇಷ್ಠತೆಯನ್ನು ಹಾಡಿ ಹೊಗಳಬೇಕು; ಪ್ರಚಾರ ಮಾಡಬೇಕು. ಜಂಗಮ ತತ್ತ್ವವನ್ನು ನೆರೆನಂಬಿದ ಬಳಿಕ ಜಂಗಮವನ್ನು ಕೊಂಡಾಡಬೇಕು; ಜಂಗಮವನ್ನು ಮೆರೆಸಬೇಕು; ಪ್ರಸಾದ ತತ್ತ್ವವನ್ನು ಅಳವಡಿಸಿಕೊಂಡ ಬಳಿಕ ಅದರ ಹಿರಿಮೆಯನ್ನು ಅರಿತು ಪ್ರಚಾರ ಮಾಡಬೇಕು, ಇತರರಿಗೂ ಮನವರಿಕೆ ಮಾಡಿ ಕೊಡಬೇಕು.

"ಇಂತಹ ಗುರುಲಿಂಗಜಂಗಮ ಪ್ರಸಾದ ಎಂಬ ಚತುರ್ವಿಧ ಸ್ವಾಯತವನ್ನು ಅಳವಡಿಸಿಕೊಂಡು ಸಂತೃಪ್ತರಾಗಿ, ಸಮಯ ಭಕ್ತಿಯನ್ನು ಕಾಲಕೆ ತಕ್ಕಂತೆ ಮಾಡುತ್ತ ಸಂತೋಷದಿಂದ ಬದುಕುತ್ತಿದ್ದೇನೆ." ಎಂದು ಧರ್ಮಪಿತ ಬಸವಣ್ಣನವರು ಹೇಳುತ್ತಾರೆ.

1073. ಚನ್ನಬಸವಣ್ಣ ಚತುರ್ವಿಧ ಸ್ವಾಯತನು

ಗುರುವಿನಲ್ಲಿ ಸ್ವಾಯತ, ಲಿಂಗದಲ್ಲಿ ಸನ್ನಿಹಿತ
ಜಂಗಮದಲ್ಲಿ ಸದರ್ಥನು, ಪ್ರಸಾದದಲ್ಲಿ ಪರಿಣಾಮಿ.
ಇಂತೀ ಚತುರ್ವಿಧದಲ್ಲಿ ಸನ್ಮತನು,
ಲಿಂಗದೇವಯ್ಯನಲ್ಲಿ ಚೆನ್ನಬಸವಣ್ಣನು.

–ಬವದೀ. 1075

ಗುರುತತ್ತ್ವವನ್ನು ಅಂದರೆ ಸುಜ್ಞಾನವನ್ನು ಅಳವಡಿಸಿಕೊಂಡು, ಲಿಂಗದಲ್ಲಿ ಮನವನ್ನು ವಿಲೀನಗೊಳಿಸಿ ಸನ್ನಿಹಿತ ಭಾವವನ್ನು ಹೊಂದಿ, ಸಂಪತ್ತನ್ನು ಜಂಗಮದಲ್ಲಿ ಸಾರ್ಥಕವಾಗಿ ವಿನಿಯೋಗಿಸಿ, ಪ್ರಸಾದ ಸ್ವೀಕಾರದಲ್ಲಿ ಸಂತೃಪ್ತರಾಗಿ ಹೀಗೆ ಚತುರ್ವಿಧದಲ್ಲಿ ಸನ್ಮತನಾಗಿದ್ದಾನೆ ಚನ್ನಬಸವಣ್ಣನು.

ಬಸವ ಧರ್ಮ ಪೀಠದ ವಿವಿಧ ಯೋಜನೆಗಳಿಗೆ ಧನ ಸಹಾಯಕ್ಕೆ ಮನವಿ

ಬೀದರ ಜಿಲ್ಲೆಯ ಬಸವ ಕಲ್ಯಾಣದಲ್ಲಿ ದಿ.28–10–2012ರಂದು 108 ಅಡಿ ಬಸವ ಪುತ್ಥಳಿಯು ಲೋಕಾರ್ಪಣೆಗೊಂಡಿದೆ. 24 ಅಡಿ ಪೀಠದ ಮೇಲೆ (ಒಟ್ಟು 132 ಅಡಿ) ಕುಳಿತಿರುವ ಪ್ರಸ್ತುತ ಪುತ್ಥಳಿಗೆ ಸುಮಾರು 5 ಕೋಟಿ ರೂ.ಗಳ ವೆಚ್ಚವಾಗಿದೆ. ಇದಕ್ಕೆ ಪೋಷಕವಾಗಿ ಇನ್ನೂ ಹಲವಾರು ಯೋಜನೆಗಳು ಪೂರ್ಣಗೊಳ್ಳಬೇಕಿದೆ. ಶರಣ ಗ್ರಾಮದಲ್ಲಿ ವಿವಿಧ ಶರಣರು, ಶೂನ್ಯ ಪೀಠ ಪರಂಪರೆಯ 7 ಶರಣರು, ಬಸವೇಶ್ವರ ಗವಿ, ಅಕ್ಕಮಹಾದೇವಿ ಗವಿ ಇನ್ನೂ ಪೂರ್ಣಗೊಳ್ಳಬೇಕಾಗಿವೆ.

ಗುರು ಬಸವಣ್ಣನವರ ಜೀವನ ಚರಿತ್ರೆಯ 36 ಪ್ರಸಂಗಗಳನ್ನು ಆಯ್ಕೆ ಮಾಡಲಾಗಿದ್ದು ಇದರಲ್ಲಿ 3ಡಿ ಚಿತ್ರಗಳನ್ನು ನಿರ್ಮಿಸಲಾಗುವುದು. ಧ್ವನಿ ಮತ್ತು ಬೆಳಕಿನ ಸಂಯೋಜನೆಯೊಡನೆ ಈ ಚಿತ್ರಗಳು ವಿಶೇಷ ಪರಿಣಾಮವನ್ನು ಬೀರುವವು. ಶರಣ ಹರಳಯ್ಯ, ಮಧುವರಸ ಮತ್ತು ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಹುತಾತ್ಮರಾಗುವ ಸ್ಮಾರಕವನ್ನು ಮಾಡುವ ಆಶಯವಿದೆ.

ಈ ಎಲ್ಲ ಕಾರ್ಯಗಳಿಗೆ ಅಪಾರವಾದ ಹಣ ಬೇಕಾಗಿದೆ. ದಾನಿಗಳು ಉದಾರವಾಗಿ ದೇಣಿಗೆ ನೀಡಬೇಕೆಂದು ಕೋರುತ್ತೇವೆ.

ತಮ್ಮ ಶಕ್ತ್ಯಾನುಸಾರ, ಭಕ್ತ್ಯಾನುಸಾರ ಎಷ್ಟು ಕೊಟ್ಟರೂ ಸ್ವೀಕರಿಸಲಾಗುವುದು

1. ಗುರು ಬಸವಣ್ಣನವರ ಜೀವನ ಚರಿತ್ರೆಗಾಗಿ ಒಂದು ಘಟನೆಗೆ ಒಂದೂವರೆ ಲಕ್ಷ (1,50,000) ರೂ. ಕೊಟ್ಟರೆ ಅವರ ಹೆಸರಿನ ಕಲ್ಲನ್ನು ಕೆತ್ತಿಸಿ ಹಾಕುವುದಲ್ಲದೆ ಅವರ (ಅಥವಾ ಅವರು ಹೇಳಿದವರ) ಭಾವ ಚಿತ್ರವನ್ನು ಹಾಕಲಾಗುವುದು.
2. ಒಂದು ಲಕ್ಷ ರೂ.(1,00,000) ಕೊಟ್ಟರೆ ಮ್ಯೂಸಿಯುಮ್‌ನಲ್ಲಿ ಅವರ ಭಾವಚಿತ್ರ ಹಾಕಲಾಗುವುದಲ್ಲದೆ ಗ್ರಾನೈಟ್ ಕಲ್ಲಿನಲ್ಲಿ ಹೆಸರನ್ನು ಕೆತ್ತಿಸಿ ಹಾಕಲಾಗುವುದು.
3. ಐವತ್ತು ಸಾವಿರ (50,000) ಕೊಟ್ಟರೆ ಗ್ರಾನೈಟ್ ಕಲ್ಲಿನಲ್ಲಿ ಹೆಸರು ಕೆತ್ತಿಸಲಾಗುವುದು.
4. ಇಪ್ಪತ್ತೈದು ಸಾವಿರ (25,000) ಕೊಟ್ಟರೆ ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನಲ್ಲಿ ಹೆಸರು ಕೆತ್ತಿಸಲಾಗುವುದು.
5. ಹದಿನೈದು ಸಾವಿರ (15,000) ಕೊಟ್ಟರೆ ಮೆಟ್ಟಲಿನ ಮೇಲೆ ಹೆಸರು ಕೆತ್ತಿಸಲಾಗುವುದು.
6. ಹನ್ನೊಂದು ಸಾವಿರ (11,000) ಕೊಟ್ಟರೆ ಸಾಮೂಹಿಕವಾಗಿ ಹೆಸರು ಕೆತ್ತಿಸಲಾಗುವುದು.

80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ ಬೇಕಾದವರು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಚೆಕ್/ಡಿ.ಡಿ. ಕೊಡಬೇಕು. ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡುವವರಿಗಾಗಿ ಖಾತೆಯ ಸಂಖ್ಯೆ ಕೊಡಲಾಗುವುದು. ದೂರವಾಣಿಯ ಮೂಲಕ ಆಸಕ್ತರು ಸಂಪರ್ಕಿಸಬಹುದು.

ಬಸವ ಧರ್ಮ ಪೀಠದ ವಿವಿಧ ಯೋಜನೆಗಳಿಗೆ ಸದ್ಭಕ್ತರು ಉದಾರವಾಗಿ ಧನಸಹಾಯ ಮಾಡಿ ವಿಶ್ವಗುರು ಬಸವಣ್ಣನವರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ, ಕೂಡಲಸಂಗಮ–ಬಸವಕಲ್ಯಾಣ

ಸಂಪರ್ಕಿಸುವ ವಿಳಾಸಗಳು :

1. ಬಸವ ಧರ್ಮ ಪೀಠ (ರಿ), ಬಸವ ಮಂಟಪ, 2035, 20ನೇ ಮೇನ್, 2ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು–10, ದೂ. 080–22923736, 9448137508
2. ಬಸವ ಧರ್ಮ ಪೀಠ (ರಿ), ಮಹಾಮನೆ ಮಹಾಮಠ, ಶರಣ ಲೋಕ, ಕೂಡಲ ಸಂಗಮ–587115, ತಾ–ಹುನಗುಂದ, ಜಿ–ಬಾಗಲಕೋಟೆ, ದೂ. 9449588665, 9448046554
3. ಬಸವ ಧರ್ಮ ಪೀಠ (ರಿ), ಬಸವ ಬಸವ ಮಹಾಮನೆ, ಮುಖ್ಯರಸ್ತೆ, ತ್ರಿಪುರಾಂತ ಬಸವ ಕಲ್ಯಾಣ–585 327, ತಾ–ಬಸವಕಲ್ಯಾಣ, ಜಿ–ಬೀದರ್.

ದೂ. 9448732456, 9480497346

"ಲಿಂಗಾಯತವು ಸ್ವತಂತ್ರ ಧರ್ಮ" ವೀರಶೈವಕ್ಕೆ ಪರ್ಯಾಯವಲ್ಲ

ಇತ್ತಿತ್ತಲಾಗಿ ಬೆಳಗಾವಿಯಲ್ಲಿ ಮುಖಂಡರೆನ್ನಿಸಿಕೊಳ್ಳುವ, ಧರ್ಮದ ಗಂಧವೇ ಗೊತ್ತಿಲ್ಲದ ಬಹುತೇಕರು ಎದೆಯ ಮೇಲೆ ಲಿಂಗವೂ ಇಲ್ಲದವರು ಕೂಡಿ ವೀರಶೈವ ಲಿಂಗಾಯತ ಒಂದೇ ಎಂದು ಹೇಳಿಕೆ ನೀಡಿ ತಮ್ಮ ಮೂರ್ಖತನ ಪ್ರದರ್ಶನ ಮಾಡಿದ್ದಾರೆ. ಇವರೆಲ್ಲಾ ಎಂಥವರೆಂದರೆ ಇಂದು "ಪಕ್ಷಾಂತರ ಮಾಡುವುದು ನಮ್ಮ ರಕ್ತದಲ್ಲಿ ಇಲ್ಲಾ" ಎಂದು ಹೇಳಿ ಮಾರನೇ ದಿನವೇ ಪಕ್ಷಾಂತರ ಮಾಡಿ ನಾಡಿನ ರಕ್ಷಣೆಗಾಗಿ ಪಕ್ಷಾಂತರ ಮಾಡುತ್ತಿದ್ದೇನೆಂದು ಹೇಳುತ್ತ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿರುವ ಕುಳಗಳು. ಇಂಥವರಿಂದೇನು ಧರ್ಮ ಉದ್ಧಾರವಾಗುತ್ತದೆ ? ಇವರಿಗೆಲ್ಲಾ ಕಾಣುವುದು ಒಂದೇ ಒಂದು; ಅದು ಮುಂದಿನ ಚುನಾವಣೆಯ ಒಂದೇ ಅಂಶದ ಕಾರ್ಯಕ್ರಮ- ತಾವು ಏನಾದರೂ ಮಾಡಿ ಅಧಿಕಾರದ ಗದ್ದುಗೆ ಏರುವುದು.

ಲಿಂಗಾಯತ-ವೀರಶೈವ ಸಮಾನಾರ್ಥಕ ಪದಗಳಲ್ಲ. ಲಿಂಗ+ಆಯತ=ಲಿಂಗಾಯತ, ಲಿಂಗ+ಉಳ್ಳವ=ಲಿಂಗವಂತ ಅಂದರೆ, ನಿರಾಕಾರ ದೇವನ ಕುರುಹಾದ ಇಷ್ಟಲಿಂಗ ರೂಪದಲ್ಲಿ ಪೂಜಿಸುವವರು ಲಿಂಗಾಯತರು. ಶಿವ ಜೀವೈಕ್ಯ ವಿದ್ಯೆಯಲ್ಲಿ ರಮಿಸುವ ಅನೇಕ ಶಿವಭಕ್ತರು ಬ್ರಾಹ್ಮಣ ಕ್ಷತ್ರಿಯ ವೈಶ್ಯರಲ್ಲಿದ್ದಾರೆ. ವೀರ=ಶೂರ, ಶೈವ=ಶಿವನನ್ನು ಅನನ್ಯಭಾವದಿಂದ ಪೂಜಿಸುವವರು. ವೀರಶೈವ ಇದು ಲಿಂಗಾಯತರ ಮೇಲೆ ಬಲವಂತವಾಗಿ ಹೇರಲ್ಪಟ್ಟಿದು. ಅವೈದಿಕವಾದ ಬಸವ ಧರ್ಮವು ಸ್ವತಂತ್ರ ಧರ್ಮ ಆದರೆ ವೀರಶೈವವು ವೈದಿಕ ಪಂಥ. ಲಿಂಗಾಯತರ ಧರ್ಮ ಸಂವಿಧಾನ ವಚನ ಸಾಹಿತ್ಯ, ಧರ್ಮ ಭಾಷೆ ಕನ್ನಡ. ವೀರಶೈವ ಸಿದ್ಧಾಂತ ಶಿಖಾಮಣಿಯು ವೇದಾಗಮಗಳ ಆಚಾರ ವಿಚಾರಗಳನ್ನು ಸಂಗ್ರಹಿಸಿ ಸಂಸ್ಕೃತದಲ್ಲಿ ಕೃತಕವಾಗಿ ಬರೆಯಲ್ಪಟ್ಟ ವೈದಿಕ ಗ್ರಂಥ. ವಿಪ್ರಮೊದಲಾಗಿ ಅಂತ್ಯಜ ಕಡೆಯಾಗಿ ಅಂಗದ ಮೇಲೆ ಲಿಂಗವುಳ್ಳ ಭಕ್ತರೆಲ್ಲಾ ಒಂದೇ ಎನ್ನುವದು ವಚನ ಪ್ರಣೀತ ಲಿಂಗಾಯತ ಧರ್ಮ. ಗುರುವರ್ಗ ಬೇರೆ, ಭಕ್ತವರ್ಗ ಬೇರೆ ಎಂದು ಜಾತಿ ವ್ಯತ್ಯಾಸ ಮಾಡುವದು ಸಿದ್ಧಾಂತ ಶಿಖಾಮಣಿ ಪ್ರಣೀತ ವೀರಶೈವ. ಲಿಂಗಾಯತ ಸಮುದ್ರದಂತೆ ಎಲ್ಲರನ್ನು ಇಂಬಿಟ್ಟು ಕೊಳ್ಳುತ್ತದೆ. ವೀರಶೈವವು ಸಮುದ್ರಕ್ಕೆ ಸೇರುವ ಒಂದು ಸಣ್ಣ ನದಿಯಿದ್ದಂತೆ. ನಿರ್ದಿಷ್ಟವಾದ ಗುಣ ಲಕ್ಷಣಗಳಿಲ್ಲ. ವೀರಶೈವವು ಬಸವ ಪೂರ್ವದಲ್ಲಿಯೇ ಇದ್ದು ಆಂಧ್ರ, ತಮಿಳುನಾಡು, ಕೇರಳಗಳಲ್ಲಿ ತಮ್ಮ ಆಚಾರ ವಿಚಾರಗಳಿಂದ ಬೇರೆಯೇ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಕಾರಣ ವೀರಶೈವ ಮತ್ತು ಲಿಂಗಾಯತ ಒಂದೇ ಆಗಲು ಸಾಧ್ಯವೇ ಇಲ್ಲ. 12ನೆಯ ಶತಮಾನದಿಂದ 20ನೆಯ ಶತಮಾನದವರೆಗೆ ಜನಮಾನಸದಲ್ಲಿ ರೂಢಿಯಲ್ಲಿ ಲಿಂಗಾಯತ ಪದವೇ ಇದ್ದು ಬಸವಣ್ಣನವರೇ ಧರ್ಮಗುರು ಎಂದು ದೃಢವಾಗಿ ನಂಬಿದ್ದರು. 1904ರಲ್ಲಿ ಹಾನಗಲ್ಲ ಕುಮಾರ ಸ್ವಾಮಿಗಳು ಲಿಂಗಾಯತರೆಲ್ಲಾ ವೀರಶೈವರೆಂದು ಭ್ರಮೆ ಹುಟ್ಟಿಸಿದರು, ಇಷ್ಟಲಿಂಗಧಾರಿಗಳನ್ನು ಭ್ರಮ ನಿರಸನಗೊಳಿಸಿ, 12ನೆಯ ಶತಮಾನದ ಕೊಂಡಿ ಮಂಚಣ್ಣನ ಸಂತತಿಯವರನ್ನು ಜಾಗ್ರತಗೊಳಿಸಿ ಜಾತಿ ಸರ್ಟಿಫಿಕೆಟ್‌ಗಳಲ್ಲಿ ಕೂಡ ವೀರಶೈವ ಲಿಂಗಾಯತ ಎಂದು ಸಾದರ ಪಡಿಸುವ ಮಟ್ಟಕ್ಕೆ ಹೋಗಲಾಯಿತು. ವೈದಿಕ ಶೈವ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಬಸವಣ್ಣನವರು ಅದನ್ನು ಧಿಕ್ಕರಿಸಿ ಲಿಂಗಾಯತ ಧರ್ಮ ಸ್ಥಾಪಿಸಿದವರು ಪುನಃ ಮರುಕಳಿಸಿ ಮತ್ತೆ ಶೈವ ಧರ್ಮದ ಅನುಯಾಯಿಯಾಗಲು ಸಾಧ್ಯವೇ? ಅದರಂತೆ ಕೆಲ ವಚನಗಳನ್ನು ತಿರುಚಿ ಜನರ ದಿಶಾಭೂಲಮಾಡಲು ಪ್ರಯತ್ನಿಸುತ್ತಿದ್ದಾರೆ. ಎಲ್ಲ ಉದ್ಯೋಗದ ಎಲ್ಲ ಪಂಗಡದವರನ್ನು ಒಟ್ಟುಗೂಡಿಸಿ ದಾರಿತೋರಿದ ಗುರು ಬಸವಣ್ಣನವರ ವಿಚಾರಧಾರೆಗೆ ವ್ಯತಿರಿಕ್ತವಾಗಿ ವೀರಶೈವ ಸಮಾಜವು ರೂಪುಗೊಂಡಿದೆ.

ಶತ ಶತಮಾನಗಳಿಂದ ಶೋಷಣೆಗೊಳಪಟ್ಟ ಜನರನ್ನು ವೈದಿಕ ಪುರೋಹಿತ ಶಾಹಿ, ದೇವಾಲಯ ಶಾಹಿ, ಮತ್ತು ಬಹುದೇವತೋಪಾಸನೆಗಳಿಂದ ಮುಕ್ತಗೊಳಿಸಿದವರು ಗುರು ಬಸವಣ್ಣನವರು, ಆದರೆ ಹಿಂದೂ ಧರ್ಮದ ಅಂಗವಾಗಿ ಬಳಕೆಯಲ್ಲಿರುವ ವೀರಶೈವವು ಎಂದೂ ಸ್ವತಂತ್ರ

ಧರ್ಮವಾಗಲು ಸಾಧ್ಯವಿಲ್ಲ. ಇದನ್ನು ತಿಳಿದ ಆಷಾಡಭೂತಿ ವೀರಶೈವ ಕೆಲ ಮಠಾಧೀಶರು, ವೀರಶೈವ ವಾದಿಗಳು ವೀರಶೈವ; ಲಿಂಗಾಯತ ಒಂದೇ ಎಂಬ ಕುಹಕ ಪುಂಗಿ ಊದುತ್ತಿದ್ದಾರೆ. ಕೇರಳ ವೀರಶೈವರು ಮಾಂಸಾಹಾರಿಗಳು, ಲಿಂಗಾಯತರು ಶುದ್ಧ ಸಸ್ಯಾಹಾರಿಗಳು ಇವರಿಬ್ಬರೂ ಒಂದೇ ಎಂದು ಹೇಳುವುದು "ವೆಜ್ ಅಂಡ್ ನಾನ್ ವೆಜ್" ಎರಡೂ ಹೋಟೆಲ್‌ಗಳು ಒಂದೇ ಎಂದು ಹೇಳುವಂತೆ ಹಾಸ್ಯಾಸ್ಪದ.

ಬ್ರಿಟಿಷ್ ಸರಕಾರದಲ್ಲಿ ಮುಂಬೈ, ಮದ್ರಾಸ್, ಮೈಸೂರು ಸರಕಾರದ ದಾಖಲೆಗಳಲ್ಲಿ 'ಲಿಂಗಾಯತ' ಪದವನ್ನೇ ಬಳಸಲಾಗಿದೆ. ಡೆಪ್ಯೂಟಿ ಚನ್ನಬಸಪ್ಪನವರು 1868ರಲ್ಲಿ ಬೆಳಗಾವಿಯಲ್ಲಿ ಸ್ಥಾಪಿಸಿದ ಉಚಿತ ಪ್ರಸಾದ ನಿಲಯ, ಅರಟಾಳ ರುದ್ರಗೌಡರು 1883ರಲ್ಲಿ ಸ್ಥಾಪಿಸಿದ ವಿದ್ಯಾಭಿವೃದ್ಧಿ ಸಂಸ್ಥೆ, 1905ರಲ್ಲಿ ಮೈಸೂರು ವಿದ್ಯಾನಿಧಿ ಸಂಘ, 1907ರಲ್ಲಿ ವಾರದ ಮಲ್ಲಪ್ಪನವರು ಸ್ಥಾಪಿಸಿದ ಸಂಘ, ಹಳಕಟ್ಟಿಯವರು 1910ರಲ್ಲಿ ವಿಜಾಪೂರ ಜಿಲ್ಲಾ ಶಿಕ್ಷಣ ಸಂಸ್ಥೆ, 1916ರ ಬೆಳಗಾವಿ ಕರ್ನಾಟಕ ವಿದ್ಯಾ ಸಂಸ್ಥೆ, ಅಖಿಲ ಭಾರತ ಲಿಂಗಾಯತ ಮಹಾ ಸಭಾ ಸಂಸ್ಥೆಗಳೂ ಅಲ್ಲದೆ ಕೆ.ಎಲ್.ಇ ಶಿಕ್ಷಣ ಸಂಸ್ಥೆ ಇವೆಲ್ಲವೂ ಲಿಂಗಾಯತ ಸಂಸ್ಥೆಗಳೇ! ಇವುಗಳಲ್ಲಿ ಎಲ್ಲೂ ವೀರಶೈವ ಲಿಂಗಾಯತ ಪದ ಬಳಸಿಲ್ಲ. 1904ರ ನಂತರದ ಕೆಲ ಕುಹಕಿಗಳು ಲಿಂಗಾಯತ ಪದದ ಮೇಲೆ ದಬ್ಬಾಳಿಕೆ ಮಾಡಿ ವೀರಶೈವ ಲಿಂಗಾಯತ ಎಂದು ಲಿಂಗಾಯತಕ್ಕೆ ಅಪಚಾರ ಮಾಡುತ್ತಿದ್ದಾರೆ. ದುರ್ಬುದ್ಧಿಯ ರಾಜಕಾರಣಿಗಳು ಓಟಿನ ಆಸೆಗಾಗಿ ತಮ್ಮ ಪಾರಂಪರಿಕ ಮಠಾಧೀಶರನ್ನು ಕೂಡಿಸಿಕೊಂಡು ಜನ ಪ್ರೀತಿ ಗಳಿಸುವುದಕ್ಕಾಗಿ ಎರಡೂ ಕಡೆಗೆ ಡೋಲು ಬಡಿಯುತ್ತಿದ್ದಾರೆ. ಕೆಲ ಮಠಾಧೀಶರು ಮಾರವಾಡಿಗಳಂತೆ ಹಣ ಗಳಿಸುತ್ತ ವ್ಯವಹಾರ ಚತುರರಾಗಿದ್ದಾರೆ. ಇವರೆಲ್ಲಾ ಧರ್ಮದ ಬೆಳವಣಿಗೆಗಿಂತ ತಮ್ಮ ಆಸ್ತಿಯ ಬೆಳವಣಿಗೆಗೆ ಹೆಚ್ಚು ಒತ್ತು ಕೊಡುತ್ತಿದ್ದಾರೆ.

ಈಗ 20 ವರ್ಷದಿಂದ "ಲಿಂಗಾಯತ ಧರ್ಮ ಸ್ವತಂತ್ರ ಧರ್ಮವಾಗಬೇಕು, ಇದು ಅಲ್ಪ ಸಂಖ್ಯಾತರ ಸೌಲಭ್ಯ ಪಡೆಯಬೇಕು. ಲಿಂಗಾಯತರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು." ಎಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಎಷ್ಟೊಂದು ಹೋರಾಡುತ್ತಿದ್ದರೂ ಅದಕ್ಕೆ ಅಡ್ಡಗಾಲು ಹಾಕಿ ಲಿಂಗಾಯತರಿಗೆ ದ್ರೋಹ ಮಾಡುವ ಈ ಜನರು "ಎಲ್ಲರೂ ಒಂದಾಗಿರಿ" ಎಂದು ವೇದಿಕೆಯ ಮೇಲೆ ಮಂತ್ರ ಜಪಿಸುತ್ತಿದ್ದಾರೆ. ಇವರು ಬೇಕಾದರೆ "ವೀರಶೈವ ಸ್ವತಂತ್ರ ಧರ್ಮ" ಮಾಡಿಕೊಳ್ಳಲಿ. ಲಿಂಗಾಯತರನ್ನೇಕೆ ತಳಕು ಹಾಕಿಕೊಳ್ಳಬೇಕು. ವೀರಶೈವವು ಸ್ವತಂತ್ರ ಧರ್ಮವಾಗುವುದಿಲ್ಲಾ. ಲಿಂಗಾಯತರನ್ನು ಸ್ವತಂತ್ರವಾಗಲು ಬಿಡುವುದಿಲ್ಲಾ. ಹೀಗೆ ವೀರಶೈವವಾದಿಗಳು ಲಿಂಗಾಯತರಿಗೆ ಬೆನ್ನು ಹತ್ತಿದ ಬೇತಾಳದಂತಾಗಿದ್ದಾರೆ. ಗುರು ಬಸವಣ್ಣನವರೇ ತಾವು ಸ್ಥಾಪಿಸಿದ ಲಿಂಗಾಯತ ಧರ್ಮವನ್ನು ರಕ್ಷಿಸಿ ಕಾಪಾಡಬೇಕು ಅಷ್ಟೇ.!

ಡಾ॥ ಶಿ.ಬಾ.ಪಾಟೀಲ, ಗಣನಾಯಕರು, ಬಸವ ಧರ್ಮ ಪೀಠ
"ಬಸವಶ್ರೀ" ಬಸವನಬೀದಿ, ಸಂಕೇಶ್ವರ, ಜಂಗಮನುಡಿ-98803 80115

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೆ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು; ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು- ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರು ಮನೆಯಲ್ಲಿ ಆಗಾಗ ಸೇರುವುದು ಗೊತ್ತು. ತಾಯಿ -ತಂದೆ, ಅಕ್ಕ -ತಂಗಿ, ಅಣ್ಣ -ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃ ಹೃದಯಿಯಾದ ನನ್ನ ಇಚ್ಛೆಯೂ ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಶರಣ ಮೇಳ ನಿಮಗೆಲ್ಲ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ -ಸೋದರತ್ವ - ಸ್ವಾತಂತ್ರ್ಯ ಇವು ನನ್ನ ತತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ, ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ ಮೊಹಮ್ಮದ್, ಏಸು, ನಾನು ಎಲ್ಲಾ ಅಣ್ಣ ತಮ್ಮಂದಿರಂತೆ; ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ - ಸ್ಥಿತಿ -ಲಯ - ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯ ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲಾ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದವನ್ನು ರೂಢಿಸಿಕೊಂಡಿದ್ದಾರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣ ವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನ ದೇವರು- ಧರ್ಮ ಸಂಸ್ಕಾರದ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೆ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು

ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂಬೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ -ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣ ಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರವನ್ನು ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ವ ಸಂಹಿತೆ ಯಾವುದೇ ಒಂದು ಜಾತಿ, ವರ್ಣಕ್ಕೆ ಸೀಮಿತವಾಗದ "ಗಣ ಧರ್ಮ"ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು. ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆವುದಲ್ಲದೆ ಎಲ್ಲರಲ್ಲೂ ಧರ್ಮ ಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆ ಮಂದಿಯೆಲ್ಲ ಕುಳಿತು ಸಂಜೆಯ ಪ್ರಾರ್ಥನೆ -ನೆನಹು ಮಾಡಿರಿ.

ಶರಣ ಸಂಗಮ-ವಾರದ ಪ್ರಾರ್ಥನೆ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವ ಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ, ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನಹು : ಪ್ರತಿದಿನ ಸಂಜೆ 7 ಗಂಟೆಗೆ ಸರಿಯಾಗಿ ನೀವು ಎಲ್ಲೇ ಇದ್ದರೂ ಆ ಸ್ಥಳದಲ್ಲಿ 15 ನಿಮಿಷದವರೆಗೆ ಪ್ರಾರ್ಥನೆಯನ್ನು ವೈಯಕ್ತಿಕವಾಗಿ ಆಗಲಿ, ಸಾಮೂಹಿಕವಾಗಿ ಆಗಲಿ, ಅಳವಡಿಸಿಕೊಂಡು ತಪ್ಪದೇ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ವ್ಯಕ್ತಿ ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿ ಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ- ಪೂಜೆ ಮಾಡಿರಿ. ಶಿವರಾತ್ರಿ ಯಂದು ಬೆಳಿಗ್ಗೆ ವಿಶಾಲವಾದ

ಮೈದಾನದಲ್ಲಿ ಧರ್ಮಬಾಂಧವರೆಲ್ಲರೂ ಸೇರಿ ಗಣಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು, ಕುಟುಂಬದವರೆಲ್ಲರು ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. ಗಣಮೇಳವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲಾ ಸೀಮೆ ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ 11ರಿಂದ 15ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಐದೂ ದಿವಸಗಳ ಕಾಲ ಭಾಗಿಗಳಾಗಲು ಸಮಯ ಇಲ್ಲದವರು ಜನವರಿ 14ರಂದು ನಡೆಯುವ ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣದಲ್ಲಿ ಭಾಗಿಗಳಾಗಿ ನಿಮ್ಮ ಅನುಯಾಯಿತ್ವವನ್ನು ಸ್ಥಿರೀಕರಿಸಿರಿ. ಯುವನಾಮ ಸಂವತ್ಸರದ ಮಕರ ಸಂಕ್ರಾಂತಿಯಂದೇ ನನಗೆ ಸಾಕ್ಷಾತ್ಕಾರವಾಗಿ ಇಷ್ಟಲಿಂಗದ ಪರಿಕಲ್ಪನೆ ಹೊಳೆದುದು. ಅಂದೇ ಲಿಂಗಾಯತ ಧರ್ಮವು ಸ್ಥಾಪನೆ ಗೊಂಡುದು.

ನೀವು ತಪ್ಪದೆ ಭಾಗಿಯಾಗಬೇಕಾದ ಇನ್ನೊಂದು ಸಮಾವೇಶ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ಆಶ್ವಯುಜ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆ ಯಂದು ನಡೆಯುವ ಕಲ್ಯಾಣ ಪರ್ವ. ಮೂರೂ ದಿವಸ ಕಾಲ ಭಾಗವಹಿಸಲು ಆಗದೆ ಇದ್ದವರು ಚತುರ್ದಶಿಯಂದು ನಡೆಯುವ ಶರಣ ವಂದನೆಯಲ್ಲಿ ಭಾಗವಹಿಸಿ 12ನೆಯ ಶತಮಾನದ 770 ಅಮರ ಗಣಂಗಳಿಗೆ ಶರಣು ಶರಣಾರ್ಥಿ ಹೇಳಬೇಕು. ಶರಣ ಮೇಳ ಮತ್ತು ಕಲ್ಯಾಣ ಪರ್ವ -ಇವೆರಡೂ ಕಡ್ಡಾಯ ವಿಧಿಗಳಾಗಲಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಯ್ಯ, ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ -ಮಧುವಯ್ಯ- ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದಡೆ ಸೇರಿ ಹಾಡಿ ಪಾಡಿ ನಲಿಯ ಬೇಕೆಂದು ತಾನೇ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು. ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು. ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ ಒಗೆತನವ ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ- ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ - ಪ್ರತಿಷ್ಠೆಗಳನ್ನು ಬಿಡಬೇಕು ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಲಿರುತ್ತಾಳೆ. ಬನ್ನಿ ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ -ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯ ಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ - ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ ಮಾತಾಜಿ)

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2013 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ತಾರನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2013ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 26ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2012 ನೆಯ ಇಸವಿಯ 26ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸು ವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
14-11-2012

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

41.	11-12-2012	ಬಸವ (ಮಂಗಳ)ವಾರ	ಸಂಕೇಶ್ವರ
42.	12-12-2012	ಚನ್ನ (ಬುಧ)ವಾರ	ಗಡಿಹಿಂಗ್ಲಾಜ್
43.	13-12-2012	ಪ್ರಭು(ಗುರು)ವಾರ	ಗೋಕಾಕ್
44.	14-12-2012	ಮಾತೃ (ಶುಕ್ರ)ವಾರ	ಗೋಕಾಕ್
45.	15-12-2012	ಶರಣ (ಶನಿ)ವಾರ	ಗೋಕಾಕ್
46.	16-12-2012	ದೇವ(ಭಾನು)ವಾರ	ಗೋಕಾಕ್
47.	17-12-2012	ಶಿವ (ಸೋಮ)ವಾರ	ಶೇಗುಣಸಿ
48.	18-12-2012	ಬಸವ (ಮಂಗಳ)ವಾರ	ಖವಟಕೊಪ್ಪ

49.	19-12-2012	ಚನ್ನ(ಬುಧ)ವಾರ	ತಾಂವಶಿ
50.	20-12-2012	ಪ್ರಭು(ಗುರು)ವಾರ	ಅಥಣಿ
51.	21-12-2012	ಮಾತೃ(ಶುಕ್ರ)ವಾರ	ಕನಮಡಿ
52.	22-12-2012	ಶರಣ(ಶನಿ)ವಾರ	ಕನಮಡಿ
53.	23-12-2012	ದೇವ (ಭಾನು)ವಾರ	ಚಡಚಣ
54.	24-12-2012	ಶಿವ (ಸೋಮ)ವಾರ	ಬಿಜಾಪುರ
55.	25-12-2012	ಬಸವ (ಮಂಗಳ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)
56.	26-12-2012	ಚನ್ನ(ಬುಧ)ವಾರ	ಗುಲಬರ್ಗಾ(ಬ.ಮಂಟಪ ಮಹಾಂತನಗರ)
57.	27-12-2012	ಪ್ರಭು(ಗುರು)ವಾರ	ಯಲಮಾಮಿಡಿ
58.	28-12-2012	ಮಾತೃ (ಶುಕ್ರ)ವಾರ	ಉದಗೀರ
59.	29-12-2012	ಶರಣ(ಶನಿ)ವಾರ	ಕೋಳಾರ (ಕೆ)
60.	30-12-2012	ದೇವ (ಭಾನು)ವಾರ	ಬೀದರ
61.	31-12-2012	ಶಿವ (ಸೋಮ)ವಾರ	ಜಹಿರಾಬಾದ್
62.	1-01-2013	ಬಸವ(ಮಂಗಳ)ವಾರ	ಹೈದ್ರಾಬಾದ್
63.	2-01-2013	ಚನ್ನ(ಬುಧ)ವಾರ	ಹೈದ್ರಾಬಾದ್
64.	3-01-2013	ಪ್ರಭು(ಗುರು)ವಾರ	ಹೈದ್ರಾಬಾದ್
65.	4-01-2013	ಮಾತೃ(ಶುಕ್ರ)ವಾರ	ಹೈದ್ರಾಬಾದ್
66.	5-01-2013	ಶರಣ (ಶನಿ)ವಾರ	ಹೈದ್ರಾಬಾದ್
67.	6-01-2013	ದೇವ (ಭಾನು)ವಾರ	ಹೈದ್ರಾಬಾದ್
70.	7-01-2013	ಶಿವ (ಸೋಮ)ವಾರ	ಹೈದ್ರಾಬಾದ್
71.	8-01-2013	ಬಸವ (ಮಂಗಳ)ವಾರ	ಹೈದ್ರಾಬಾದ್
72.	9-01-2013	ಚನ್ನ(ಬುಧ)ವಾರ	ಹೈದ್ರಾಬಾದ್
73.	10-01-2013	ಪ್ರಭು(ಗುರು)ವಾರ	ಕೂಡಲ ಸಂಗಮಕ್ಕೆ ಪ್ರಯಾಣ


ಉಡುಗೊರೆಯಾಗಿ ಕಲ್ಯಾಣ ಕಿರಣ


* ಬಸವ ತತ್ತ್ವ ಪ್ರಚಾರಕ್ಕೆ ಮೀಸಲಾದ ಪತ್ರಿಕೆ ಕಲ್ಯಾಣ ಕಿರಣ. ಪ್ರೌಢ ಲೇಖನಗಳಿಂದ ಕೂಡಿದ ಕಲ್ಯಾಣ ಕಿರಣದಲ್ಲಿ ಗುರು ಬಸವಣ್ಣನವರ ವಚನಗಳಿಗೆ ಪೂಜ್ಯ ಮಾತಾಜಿಯವರು ವ್ಯಾಖ್ಯಾನವನ್ನು ಬರೆಯುತ್ತಲಿದ್ದಾರೆ. ಇಂಥ ಪತ್ರಿಕೆಯನ್ನು ಉಡುಗೊರೆಯಾಗಿ ನಿಮ್ಮ ಬಂಧುಗಳು, ಮಿತ್ರರಿಗೆ ವಿಶೇಷ ಸಂದರ್ಭಗಳಲ್ಲಿ ಕಳಿಸಿರಿ. ಅವರ ಪರವಾಗಿ ಚಂದಾ ತುಂಬಿ, ವಿಳಾಸಕೊಟ್ಟರೆ ಅವರಿಗೆ ಪತ್ರಿಕೆ ಕಳಿಸಲಾಗುವುದು.
* ಬೆಳ್ಳಿಯ ನಾಣ್ಯ : ಗುರು ಬಸವಣ್ಣನವರ ಚಿತ್ರವಿರುವ 10 ಗ್ರಾಂ ಬೆಳ್ಳಿ ನಾಣ್ಯಗಳನ್ನು ಸಿದ್ಧಪಡಿಸಲಾಗಿದ್ದು ಒಂದರ ಬೆಲೆ 1000(ಒಂದು ಸಾವಿರ)ರೂ. ಅಂಚೆ(ಕೋರಿಯರ್) ಮೂಲಕ ತರಿಸಿಕೊಳ್ಳಬೇಕಾದರೆ ಅದರ ಛಾರ್ಜು 40 ರೂ. ಸೇರಿಸಿ 1040(ಒಂದು ಸಾವಿರದ ನಲವತ್ತು)ರೂಗಳನ್ನು ಎಂ.ಓ/ಡಿ.ಡಿ/ಮನಿ ಟ್ರಾನ್ಸ್‌ಫರ್ ಮೂಲಕ ಬೆಂಗಳೂರು ವಿಳಾಸಕ್ಕೆ ಕಳಿಸಬೇಕು. ದೂ. 94481 37508

2013ನೇ ವರ್ಷದ ಶರಣರ ಜಯಂತಿ - ಹಬ್ಬಗಳು

ಕೂಡಲ ಸಂಗಮದಲ್ಲಿ ಶರಣಮೇಳ	ಜನವರಿ 11 ರಿಂದ 15
ಬಸವ ಧರ್ಮ ಸಂಸ್ಥಾಪನಾ ದಿನ-ಶರಣ ಸಮಾಗಮ	ಜನವರಿ 14
ಸಿದ್ಧರಾಮೇಶ್ವರ ಜಯಂತಿ★	ಜನವರಿ 14
ಗಣರಾಜ್ಯೋತ್ಸವ★	ಜನವರಿ 26
ಚನ್ನಹುಣ್ಣಿಮೆ (ಉಳಿವೆಯಲ್ಲಿ ರಥೋತ್ಸವ)	
ಗಣಭೋಜನ	ಫೆಬ್ರವರಿ 25
ಸರ್ವಶರಣರ ದಿನಾಚರಣೆ / ಮಹಾ[illegible] /	
ಗಣ[illegible]	ಮಾರ್ಚ್ 10
ಪೂಜ್ಯ ಮಾತಾಜಿ ವರ್ಧಂತಿ	ಮಾರ್ಚ್ 13
ಅಲ್ಲಮಪ್ರಭು ಜಯಂತಿ (ಚಾಂದ್ರಮಾನ ಯುಗಾದಿ)★	ಏಪ್ರಿಲ್ 11
ಅಲ್ಲಮಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳ	ಏಪ್ರಿಲ್ 11,12,13
ಅಕ್ಕಮಹಾದೇವಿ ಜಯಂತಿ	ಏಪ್ರಿಲ್ 25
ಹರಳಯ್ಯ ಜಯಂತಿ	ಏಪ್ರಿಲ್ 25
ಬಸವ ಜಯಂತಿ	ಮೇ 13
ಧಾರವಾಡದಲ್ಲಿ ಶರಣೋತ್ಸವ	ಏಪ್ರಿಲ್ 27,28,29
ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ	ಮೇ 26
ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೆ	ಜೂನ್ 30
ಬಸವ (ಲಿಂಗೈಕ್ಯ ಸಂಸ್ಮರಣೆ) ಪಂಚಮಿ	ಆಗಸ್ಟ್ 11
ನೀಲಮ್ಮ (ಲಿಂಗೈಕ್ಯ ಸಂಸ್ಮರಣೆ) ಷಷ್ಠಿ	ಆಗಸ್ಟ್ 12
ಸ್ವಾತಂತ್ರ್ಯೋತ್ಸವ★	ಆಗಸ್ಟ್ 15
ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ 82 ನೆಯ ಜಯಂತಿ ★ (ಗಣೇಶ ಚೌತಿ)	ಸೆಪ್ಟೆಂಬರ್ 9
ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ★	ಸೆಪ್ಟೆಂಬರ್ 9
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ವರ್ಧಂತಿ	ಸೆಪ್ಟೆಂಬರ್ 9
ಗಾಂಧಿ ಜಯಂತಿ★	ಅಕ್ಟೋಬರ್ 02
ಕಲ್ಯಾಣ ಕ್ರಾಂತಿ ಸಂಸ್ಮರಣೆ	ಅಕ್ಟೋಬರ್ 13,14
ಬಸವ ಕಲ್ಯಾಣದಲ್ಲಿ 12ನೆಯ ಕಲ್ಯಾಣಪರ್ವ	ಅಕ್ಟೋಬರ್ 16,17,18
ಬಸವ ಧರ್ಮದ ವಿಜಯೋತ್ಸವ ★	ಅಕ್ಟೋಬರ್ 18
ಕನ್ನಡ ರಾಜ್ಯೋತ್ಸವ★	ನವೆಂಬರ್ 01
ಚನ್ನಬಸವೇಶ್ವರ ಜಯಂತಿ	ನವೆಂಬರ್ 4
ಚನ್ನಬಸವೇಶ್ವರ ಲಿಂಗೈಕ್ಯ ದಿನಾಚರಣೆ	ನವೆಂಬರ್ 17ಗಾಂಧಿ


★ ಸರ್ಕಾರಿ ರಜಾದಿನ





ಗಾಂಧಿ ಜಯಂತಿ -ಅಕ್ಟೋಬರ್ 02
ಕಲ್ಯಾಣ ಕ್ರಾಂತಿ ಸಂಸ್ಮರಣೆ - ಅಕ್ಟೋಬರ್ 13,14,
ಬಸವ ಕಲ್ಯಾಣದಲ್ಲಿ 12ನೆಯ ಕಲ್ಯಾಣಪರ್ವ - ಅಕ್ಟೋಬರ್ 16,17,18
ಚನ್ನಬಸವೇಶ್ವರ ಜಯಂತಿ ನವೆಂಬರ್ 4
ಚನ್ನಬಸವೇಶ್ವರ ಲಿಂಗೈಕ್ಯ ದಿನಾಚರಣೆ ನವೆಂಬರ್ 17

CPMG/KA/BGW/50/2012-2014, RNI No. 19980/70, Posted at MBC
Bangalore GPO on 3rd, 10th, 20th, of Every Month. Licenced to pos
Without prepayment WPP-17, Pages 32+4(Cover Pages)







ಬಸವ ಕಲ್ಯಾಣದ ಬಸವ ದರ್ಶನ ಮಂಟಪದಲ್ಲಿ ದಿ.28-10-2012ರಂದು
ಪ್ರತಿಷ್ಠಾಪನೆಗೊಂಡ ಅಮೃತ ಶಿಲಾಮೂರ್ತಿ.

